(Sri K. PUTTASWAMY)

contended on behalf of the Government that it was not necessary to submit this Amending Bill to the President for his assent. But on that point, the High Court have held against the Government. The Government have preferred an appeal before the Supreme Court. The points at issue before the Supreme Court are quite different from the point that is contained in this Bill. What we seek today in this Bill is to validate the acquisitions that have taken place from 1945 to 1960. Sir, very recently a number of acquisitions have taken place and the Trust Board is not able to effect any improvements. It is not able to lay out roads, form into sites and distribute them. Therefore it has become very necessary to validate the acquisitions that have taken place and the Hon'ble Speaker has clarified the power of the House to validate an invalid Act which has taken place. Therefore, there can be no legal difficulty for proceeding with this Bill. I request this House to kindly take this Bill into consideration. I will put the Bill to the vote of the House.

MR. SPEAKER.—The question is:

"That the Bangalore Acquisition of Lands (Validation) Bill, 1962, be taken into consideration."

The motion was adopted.

MR. SPEAKER.—There are no amendments. I will put clause 2 of the Bill. The question is:

"That clause 2 stand part of the Bill."

The motion was adopted.

Clause 2 was added to the Bill

MR. SPEAKER.—The question is:

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill."

Motion to pass.

Sri K. PUTTASWAMY.—I beg to move:

"That the Bangalore Acquisition of Lands (Validation) Bill, 1962, be passed."

MR. SPEAKER.—The question is:

That the Bangalore Acquisition of Lands (Validation) Bill, 1962, be passed."

The motion was adopted.

2-30 P. M.

THE MYSORE HOME GUARDS BILL, 1962.

Motion to Consider.

Sri R. M. PATIL (Minister for Home).—I beg to move:

"That the Mysore Home Guards Bill, 1962, as passed by the Legislative Council be taken into consideration."

MR. SPEAKER.—Motion moved:

"That the Mysore Home Guards Bill, 1962, as passed by Legislative Council, be taken into consideration."

Sri R. M. PATIL.—Sir, this is a Bill containing scheme to safeguard the homes in times of emergency. In an emergency it is not possible either for the military or the police to take care in respect of the safety of the people in almost all localities and towns. Under such circumstances it is necessary to consider the second line of defence in order to protect the properties and lives of people. With that end in view this scheme has been sponsored. The idea of this Bill is not a new thing

in this State. This home guard arrangement was made in Bombay at the time of Second World war and after the war in 1946 a regular Bill was introduced and passed. Accordingly in the erstwhile Bombay area these organisations are functioning effectively even in times of peace. Now the same scheme is intended to be introduced throughout the State. In the four districts of erstwhile Bombay area the strength of the Home Guard is to the extent of 4000. The entire State requires an additional strength of 10,700. Twenty more towns are selected and in all these towns this arrangement of Home Guards will be made. The arrangement of the Bill is like this.

The head of the Home Guards will be Commandant General and each unit in each of the towns will have a Commandant. The object of this Bill is to see that police force is re-inforced. The Commandant will call the Home Guards to serve the citizens in times of distress. Similarly the Deputy Commissioner and the Superintendent of Police can call the Home Guards to duty. While these people are on duty they are treated as public servants and they have the status of the police officers according to their rank and file in the organisation. The Bill also contains provisions regarding their duties and responsibilities and disciplinary action. The Government has under clause 5 retained the power of rule making. The Legislative Council proposed a small amendment to the effect that the Superintendent of Police can also call the Commandant and the Home Guards to duty. This is all the amendment introduced and accepted. As accepted by the Legislative Council, this Bill is presented to this House for consideration.

MR. SPEAKER.—Was an ordinance passed in this behalf?

Sri R. M. PATIL.—Yes, an ordinance was passed as emergency was felt.

† Sri PARAMESWARAPPA.—Mr. SPEAKER, I really appreciate the object with which this Bill has been brought before this House. Especially at the time of emergency it is very necessary to develop a sort of martial spirit in the people to encounter the Chinese aggression on our country. So far as Home Guards in our country are concerned this system is existing in Bombay-Karnatak area and it was not in prevalence in old Mysore area. Therefore, in order to extend the activities of home Guards in the other parts of the country this Bill has been introduced by the Home Minister and I certainly welcome this Bill. But, my sincere apprehension is about some disqualifications put in case the Home Guards commit certain acts. My appeal to the Home Minister is, in the list of disqualifications she should put those persons who indulge in politics. They should also be disqualified.

Sri R. M. PATIL.—You want the members of the legislature to be disqualified?

Sri D. PARAMESWARAPPA.—That may be one of the conditions. If any Home Guard indulges in politics it will be dangerous to the civil liberties. The Home Guards should not be members of any political party. Therefore, I appeal to the Hon'ble Minister to seriously consider this and incorporate in this Bill such disqualifications. With these observations I welcome this measure.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈಗಿನ ತುರ್ತುಪರಿಸ್ಥಿತಿಯನ್ನು ನೋಡಿದರೆ ಈಗ ಸಭೆಯ ಮುಂದೆ ಮಂಡಿಸಿದಂಥಹಾ ಹೋಂ-ಗಾರ್ಡ್ಸ್ ಮಸೂದೆಯನ್ನು ಇನ್ನೂ ಮೊದಲೇ ಸಭೆಯನ್ನು ಕರೆದು ಮಂಡಿಸಬೇಕಾಗಿತ್ತೆಂದು ನನಗೆ ಅನ್ನಿಸುತ್ತಿದೆ. ತಡಮಾಡುವುದು ಪರಿಸ್ಥಿತಿಯ ಗಂಭೀರತೆ ಮತ್ತು ಪ್ರತಿಭಾನ್ವಿತ ಅರಿವಿನ ಪ್ರತೀಕವಾಗುವುದಿಲ್ಲ. ಈಗ

†Indicates that the remarks or speeches have not been revised by the Member concerned.

(ಶ್ರೀ ವಿ. ಎಂ. ದೇವ್).

ಈ ಬಿಲ್ಲನ್ನು ಮಂಡಿಸಲು ಸರ್ಕಾರದವರಿಗೇನು ಒಂದು ಈ ಪರಿಸ್ಥಿತಿಯ ಅನುಭವ ಉಂಟಾಗಿದೆಯೋ ಅದು ಹಿಂದಿಸಿಂದಲೂ ಅವರ ಮನಸ್ಸಿನಲ್ಲಿತ್ತು ಎಂಬುದು ಈಗ ಈ ಬಿಲ್ಲಿನಲ್ಲಿ ರಿಫ್ಲೆಕ್ಟ್ ಆಗುವಂತೆ ಮಾಡಬೇಕಾಗಿತ್ತು. ಆ ದೃಷ್ಟಿಯಿಂದ ನಾನು ಈ ಮಸೂದೆಯನ್ನು ಸರ್ಕಾರದವರೂ ಇನ್ನು ಮುಂಚೆಯೇ ತರಬೇಕಾಗಿತ್ತೆಂದು ಅಭಿಪ್ರಾಯ ಪಡುತ್ತೇನೆ. ಒಟ್ಟಿನಲ್ಲಿ ಈ ಮಸೂದೆಯಲ್ಲಿ ಅಡಗಿರತಕ್ಕ ಅಭಿಪ್ರಾಯವನ್ನು ನೋಡಿದರೆ-ಈಗ ಒದಗಿರತಕ್ಕ ಆ ಯುದ್ಧ ಪರಿಸ್ಥಿತಿಯೇನಿದೆ ಅದು ಬೇಗ ಎಲ್ಲರಿಗೂ ಗೊತಾಗುವಂತಾಗುವುದಿಲ್ಲ. ಇದೂ ಸಹ ಒಂದು ಜನತಾ ಯುದ್ಧ ಸಿದ್ಧತೆಗೆ ನಾಂದಿ ಇದ್ದಹಾಗಿರಬೇಕಾಗಿತ್ತು.

ಈ ದೃಷ್ಟಿಯಿಂದ ಈ ಮಸೂದೆಯಲ್ಲಿ ಸ್ಟೇಟ್‌ಮೆಂಟ್ ಆಫ್ ಆಬ್ಜಕ್ಟ್ ಅಂಡ್ ರೀಜನ್ಸ್‌ನಲ್ಲಾಗಲೀ ಆ ಗುರಿಯನ್ನು ಸಾಧಿಸಬೇಕಾದರೆ ಹಣ ಎಷ್ಟು ಬೇಕೆಂಬುದನ್ನು ತಿಳಿಸಿದರೇ ಹೊರತು ಆ ಕಾರ್ಯಕ್ರಮದ ಪೂರೈಕೆಗೆ ತೆಗೆದುಕೊಳ್ಳಬೇಕೆಂದಿರುವ ಕ್ರಮ ಮತ್ತು ವಿವರಗಳನ್ನು ಆಗಲೀ ಅದಕ್ಕೆ ಎಲ್ಲಿಂದ ಹಣವನ್ನು ಹೇಗೆ ತೆಗೆದುಕೊಳ್ಳುತ್ತಾರೆಂಬ ಮೂಲಗಳನ್ನು ಆಗಲಿ ಹೇಳಲಿಲ್ಲ ಎಂದು ನನಗನ್ನಿಸುತ್ತದೆ. ಉತ್ಪಾದನೆಯ ಪರಿಸ್ಥಿಯ ಅರಿವಿನಿಂದ ನಿಜವಾಗಿಯೂ ಅವಕ್ಕೆ ಪ್ರತಿಕೂಲ. ಏತಕ್ಕೆಂದರೆ ಎಷ್ಟೋ ಜನಗಳಿಗೆ ಯುದ್ಧದ ದೆಸೆಯಿಂದ ಉತ್ಪಾದನೆ ಕಡಿಮೆಯಾಗುತ್ತದೆ. ಆದುದರಿಂದ ಈ ಈ ಯೋಜನೆಯನ್ನು ಕಸಿಮಾಡುತ್ತಾರೆಂಬ ಒಂದು ಶಂಕೆ ಜನಗಳಲ್ಲಿ ಮೂಡುವುದು ಸಹಜ. ದೇಶದ ಆರ್ಥಿಕ ದೃಷ್ಟಿಯಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲ. ಅದಕ್ಕೆ ಆಡಳಿತ ಪಕ್ಷ ಇದುವರೆಗೂ ಸಮತಾವಾದ ಸಮಾಜದ ಧ್ಯೇಯ ಧೋರಣೆಗಳಿಗೆ ಅನುಗುಣವಾಗಿಲ್ಲದೆ ಆಡಳಿತ ಲೋಪದೋಷಗಳಿಂದ ಕೂಡಿದೆ. ಅವಿಶ್ವಾಸವನ್ನು ಮೂಡಿಸುವಂಥಾ ಹಿನ್ನೆಲೆಯನ್ನೂ ಸಹ ಸೃಷ್ಟಿಸಿತ್ತು ಎನ್ನುವುದು ಹಿಂದಿನ ಸಂದರ್ಭದಲ್ಲೇ ರುಜುವಾತಾಗಿದೆ. ಈ ದೃಷ್ಟಿಯಿಂದ ಅದರಲ್ಲೂ ಇಂಥಾ ಪರ್ವಕಾಲದಲ್ಲಿ ಎರಡು ಮುಖ್ಯವಾದ ವಿಷಯಗಳನ್ನು ಗಮನಿಸಬೇಕು. ಅದರಲ್ಲಿ ಒಂದನೆಯದು ಏನೆಂದರೆ—ಯೋಜನೆಯ ವ್ಯಾಪ್ತಿಗೆ ಅನಿರೀಕ್ಷಿತ ಖರ್ಚಿನ ವಿವರಗಳನ್ನು ಆಬ್ಜಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಕೊಟ್ಟಿದ್ದಾರೆ. ಎರಡನೆಯದು ಏನೆಂದರೆ ಇದಕ್ಕೆ ಬೇಕಾಗಿರತಕ್ಕ ಖರ್ಚಿನ ಮೊಬಲಗಿನ ಸಂಬಂಧದಲ್ಲಿ ಯಾವ ಯಾವ ಆದಾಯದ ಮೂಲಗಳನ್ನು ಬೆಳೆಸಿಕೊಂಡಿರುತ್ತಾರೆಂಬ ವಿವರಗಳನ್ನು ಹೇಳಬೇಕಾಗಿತ್ತು ಎಂದು ನನಗನ್ನಿಸುತ್ತದೆ. ಇದು ಅನಿರೀಕ್ಷಿತವಾದ ಖರ್ಚು. ಇದನ್ನು ಪೂರೈಕೆ ಮಾಡುವುದಕ್ಕೆ ಮತ್ತು ಉತ್ಪಾದನೆಯನ್ನು ಕುಂಠಿತ ಮಾಡದಿರಲು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬುದರ ಸುಳಿವೇ ಇಲ್ಲ. ಮಕ್ಕೀಕಾ ಮಕ್ಕಿ ಎನ್ನುವಂತೆ ಆಬ್ಜಕ್ಟ್ಸ್ ಅಂಡ್ ರೀಜನ್ಸ್ ಮತ್ತು ಮೆಮೋರಾಂಡಮ್ ಇಷ್ಟು ಕೊಡಬೇಕಾಗಿತ್ತು ಕೊಟ್ಟಿದ್ದಾರೆ. ಜೊತೆಗೆ ಮೇಲಿನ ವಿವರಣೆಯನ್ನು ಕೊಟ್ಟು ಸರ್ಕಾರದ ಮತ್ತು ಜನತೆಯ, ಗಂಭೀರತೆಯ ಅರಿವು ಮತ್ತು ಪ್ರತಿಭಾನ್ವಿತವಾಗಿ ಎದುರಿಸುವ ಹವಗೆಕೆಯ ಮನೋಭಾವವು ಇದರಲ್ಲಿ ಪ್ರತಿಬಿಂಬಿಸಬೇಕು. ಆ ದುಷ್ಟಿಯಿಂದ ಇದನ್ನು ತಯಾರು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ ಖರ್ಚನ್ನು ಪೂರೈಕೆ ಮಾಡಬೇಕಾದರೆ ಯಾವದೇಶದಲ್ಲೇ ಆಗಲಿ ಮುಖ್ಯವಾಗಿ 5 ಮೂಲಗಳಿರುತ್ತವೆ. ಒಂದನೆಯದು ಏನೆಂದರೆ ಆಡಳಿತ ನಿಯಂತ್ರಣದಲ್ಲಿ qualitative change in pay structure. Splitting pay into subsistance pay and allowance for work load. ಈ ತರಹ ಇರಬೇಕು ಎರಡನೆಯದಾಗಿ change in the agency of work execution ಈ ವಿಚಾರದಲ್ಲಿ ನಾನು ಇಷ್ಟು ಹೇಳಬಯಸುತ್ತೇನೆ. ಈಗ ಮುಖ್ಯವಾಗಿ ದೇಶದ ಆರ್ಥಿಕ ಪ್ರಗತಿಗೆ ದುಡ್ಡು ಖರ್ಚಾಗಬೇಕಾಗಿವೆ. ಈಗ ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಬಹಳ ದುಡ್ಡುದುಂದು ಖರ್ಚಾಗುತ್ತದೆ. ಅದರೊಳಗೆ ಡಿಪಾರ್ಟ್‌ಮೆಂಟಿನವರು ಪೀಸ್ ವರ್ಕ್ಸ್ ಬೇಸಿಸ್ ಮೇಲೆ ಕೆಲಸವನ್ನು ಮಾಡಿಸಿದ್ದರೆ ಬರೀ ಶರಾವತಿ ಒಂದನ್ನೇ ತೆಗೆದುಕೊಂಡರೂ ಕೂಡ ಅದು 35-40 ಕೋಟಿ ರೂಪಾಯಿಗಳಲ್ಲಿ ಆಗುತ್ತಿತ್ತು. ಅದರಲ್ಲಿ 40 ಕೋಟಿ ರೂಪಾಯಿಗಳನ್ನು ಮಿಗಿಸಬಹುದಾಗಿತ್ತು.

MR. SPEAKER.—On which clause or principle of Bill are you talking ?

ಶ್ರೀ ವಿ. ಎಂ.ದೇವ್.—Not under the Bill as it is but it is up to us to make a departure in view of the nature of this emergency; which has never arisen in India before. Besides it will make sizeable saving for the Emergency. ಇಲ್ಲಿ ನಾನು ಮುಖ್ಯವಾಗಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ. ಇಂಥಾ ಒಂದು ಪರಿಸ್ಥಿತಿ ಹೊಸದಾಗಿ ಅನಿರೀಕ್ಷಿತವಾಗಿ ಬಂತು. ಈ ಮಸೂದೆಯಲ್ಲಿ ಈಗ ಎಷ್ಟು ಹಣ ಖರ್ಚು ಮಾಡಬೇಕು ಎಂಬುದನ್ನು ಹೇಳಿದ್ದಾರೆ. ಆದರೆ ಆ ಖರ್ಚನ್ನು ಯಾವ ರೀತಿ ಒದಗಿಸಿಕೊಳ್ಳಬೇಂಬುದನ್ನು ಇದರಲ್ಲಿ ಹೇಳಿಲ್ಲ. ಆದ್ದರಿಂದ ಈ ತುರ್ತು ಪರಿಸ್ಥಿತಿಯಲ್ಲಿ ಹಣವನ್ನು ಪೂರೈಕೆ ಮಾಡಿಕೊಳ್ಳತಕ್ಕಂಥ ಮುಖ್ಯವಾದ 5 ವಿವರಣೆಗಳನ್ನು ಈ ಮಸೂದೆಯಲ್ಲಿ ಸೇರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಹಣವನ್ನು ವಸೂಲು ಮಾಡುವುದಕ್ಕೆ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಸ್‌ಗಳಿಂದ ಹೆಚ್ಚಿಗೆ ಹಣಬರುವಹಾಗೆ ಮಾಡಬಹುದು. ಇದರ ವ್ಯಾಪ್ತಿಯನ್ನು ಜಾಸ್ತಿಮಾಡಬೇಕು. ಈಗ ತುರ್ತು ಪರಿಸ್ಥಿತಿ ಇರುವವರೆಗೆ ಪ್ರೈವೇಟ್ ಸೆಕ್ಟಾರಿನಲ್ಲಿರುವ ಇಂಡಸ್ಟ್ರೀಗಳನ್ನು ನ್ಯಾಷನಲೈಜ್ ಮಾಡಬೇಕು.

ಸಾರ್ವಜನಿಕರ ಗಳಿಕೆಗೆ ಹೆಚ್ಚಿನ ವ್ಯಾಪ್ತಿ ಇಲ್ಲದಿದ್ದರೆ ದೇಶದಲ್ಲಿ ಬೇಕಾದಷ್ಟು ಗಳಿಕೆ ಆಗಲಾರದು. ದೇಶದಲ್ಲಿ ಆಗ ಅರಾಜಕತೆ ಉದ್ಭವಿಸುತ್ತದೆ. ಆದ್ದರಿಂದ

ಸಾರ್ವಜನಿಕರ ಗಳಿಕೆಗೆ ಹೆಚ್ಚಿನ ವ್ಯಾಪ್ತಿ ಇರಬೇಕು. ಈ ಸಮಯಕ್ಕೆ ಬೇಕಾದ ಮತ್ತು ಪವಿತ್ರವಾದ ನನ್ನ ಯೋಜನಾ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ. ಮತ್ತು ಅದರಲ್ಲಿರುವ ಸಲಹೆಯ ಮೇರೆಗೆ ಮಾನ್ಯ ಸಭಾಧ್ಯಕ್ಷರ ಮುಖಾಂತರ ಯುದ್ಧ ಪ್ರಯತ್ನದ ಸಾಂಕೇತಿಕ ಕಾಣಿಕೆಯಾಗಿ ನನ್ನ 5 ರೂಪಾಯಿಗಳನ್ನು ಕಳುಹಿಸುತ್ತೇನೆ.

Sri R. M. PATIL.--The whole of this discussion is not concerned with Home guards. Let him come to the point. His contribution so far as the provisions of the Bill are con^cerned is wanted and not the contribution.

ಶ್ರೀ ವಿ. ಎಂ. ದೇವ್.—ಆ ದೃಷ್ಟಿಯಿಂದ ನಾನು ಕೊಟ್ಟಿರುವ ಯೋಜನಾ ಪ್ರತಿಗಳನ್ನು ಮಾನ್ಯ ಸದಸ್ಯರೆಲ್ಲರಿಗೂ ಒದಗಿಸುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ದೃಷ್ಟಿಯಿಂದ ಶ್ರೀಯುತ ರಾದ ಮುಕ್ಕಣ್ಣಪ್ಪನವರು ಮತ್ತು ಕಾಶೀಮಠ್ ಅವರ ಪ್ರತಿಕ್ರಿಯೆಯು ಗಮನಿಸಬೇಕಾದಂಥ ವಿಚಾರ.

ಇನ್ನೊಂದು ವಿಷಯವೇನೆಂದರೆ ಇದುವರೆವಿಗೂ ಯಾವಾಗಲೂ ಟೀಕೆಗಳು ಹೊರಡುವುದಕ್ಕೆ ಸಾಧ್ಯವಿದ್ದ ಹಾಗೆ ಕಾರ್ಯಕ್ರಮವನ್ನು ನಿಯಂತ್ರಣ ಕೈಗೊಳ್ಳುವುದರಲ್ಲಿ ಜನ ಉತ್ಸಾಹ ತೋರಿಸುವುದಿಲ್ಲ. ಅದು ನಿಜವಾಗಿಯೂ ಸಾಧುವಾದದ್ದಲ್ಲ. ಪ್ರತಿಯೊಬ್ಬರೂ ಶಕ್ತ್ಯಾನುಸಾರ ಕೊಡುವ ಹಾಗೆಮಾಡಬೇಕು. ಆ ದೃಷ್ಟಿಯಿಂದ ಆಗುತ್ತದೆಯೇ ಹೊರತು ಇನ್ನಾವ ದೃಷ್ಟಿಯಿಂದಲೂ ಆಗುವುದಿಲ್ಲ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸಭಾಪತಿಯವರೇ, ನಮ್ಮ ಮುಂದೆ ಮಂಡಿಸಲ್ಪಟ್ಟಿರತಕ್ಕ ಗೃಹರಕ್ಷಕ ದಳದ ಮಸೂದೆಯನ್ನು ಸ್ವಾಗತಿಸುತ್ತಾ ಎರಡು ಮಾತುಗಳನ್ನು ಅರಿಕೆ ಮಾಡಬಯಸುತ್ತೇನೆ. ಇತ್ತೀಚೆಗೆ, ಯಾವುದೇ ರಾಷ್ಟ್ರವಾಗಲು ಪಡೆದಿರತಕ್ಕ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದರೆ ಆ ಜನರಲ್ಲಿ ಪರಾಕ್ರಮ ಏನಿದೆ ಆ ಪರಾಕ್ರಮವನ್ನು ವಿಧಿವತ್ತಾಗಿ ಆ ಜನ ರೂಡಿಸಿಕೊಳ್ಳಬೇಕು. ಹೇಗೆಂದರೆ ನಮ್ಮ ಅಹಿಂಸಾ ತತ್ವ ಏನಿದೆ ಈ ಅಹಿಂಸಾ ತತ್ವಕ್ಕೆ ಇತ್ತೀಚೆಗೆ ಸರ್ಕಾರಗಳು ಜಾಸ್ತಿ ಗಮನಕೊಟ್ಟು ನಮ್ಮ ಜನದ ಪರಾಕ್ರಮದ ಕಡೆಗೆ ಅಷ್ಟು ಗಮನವನ್ನು ಇತ್ತೀಚಿನ ವರ್ಷಗಳಲ್ಲಿ ಕೊಟ್ಟಿಲ್ಲದೇ ಇರುವ ದೆಶೆಯಿಂದ ಇವತ್ತು ಇಂತಹ ಒಂದು ಸಮಸ್ಯೆಗೆ ಅವಕಾಶವುಂಟಾಗಿದೆ. ರಕ್ಷಣಾ ಬಲವನ್ನು ಈ ಮಸೂದೆಯಲ್ಲಿ ಕಾಣಿಸಿರುವಂತೆ ಸುಮಾರು 20 ಸಂಸ್ಥೆಗಳಲ್ಲಿ ಪ್ರಾರಂಭಮಾಡಬೇಕೆಂದು ಸರ್ಕಾರದವರು ಯೋಚನೆಮಾಡಿದ್ದಾರೆ ಮತ್ತು ಗೃಹ ಮಂತ್ರಿಗಳು ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವಾಗ ಸುಮಾರು ಹತ್ತು ಸಹಸ್ರ ಮಂದಿ ಜನಗಳಿಗೆ ಇದರ ತರಬೇತನ್ನು ಕೊಡಬೇಕೆಂದು ಆಶೆ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಾದರೂ ನಮ್ಮ 10 ಸಾವಿರ ಜನಕ್ಕೆ ಏನು ತರಬೇತು ಕೊಡಬೇಕೆಂದು ಯೋಚನೆ ಮಾಡಿದ್ದೇವೋ ಅದು ನಾವು ಎದುರಿಸುತ್ತಾ ಇರತಕ್ಕ ಸಮಸ್ಯೆಗೆ ಬಹುಮಂದಿಗೆ ಪರಿಹಾರದ ರೀತಿಯಲ್ಲಿ ಕಾಣುವುದಿಲ್ಲ. ಸುಮಾರು 20 ಸಹಸ್ರ ಜನಗಳಿಂದಾದರೂ ಕೂಡ ಈ ರಾಷ್ಟ್ರೀಯ ಗೃಹ ರಕ್ಷಕ ದಳದ ತರಪೇತಿಯನ್ನು ಕೊಡುವ ಯೋಜನೆಯನ್ನು ಸರ್ಕಾರ ಮಾಡಬೇಕೆಂದು ನಾನು ಈ ಸಮಯದಲ್ಲಿ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. 20 ಸ್ಥಳಗಳು ಎಂದು ಏನು ಸರ್ಕಾರದವರು ಯೋಜನೆಮಾಡಿದ್ದಾರೆಯೋ ಆ ಸ್ಥಳಗಳೂ ಕೂಡ ಸುಮಾರು 40 ಕಡೆಗಳಲ್ಲಾದರೂ ಗೃಹ ರಕ್ಷಣದಳದ ತರಪೇತಿ ಕೇಂದ್ರಗಳನ್ನು ಸ್ಥಾಪನೆಮಾಡಿದರೆ ಬಹಳ ಅನುಕೂಲವಾದೀತೋ ಏನೋ ಎಂದು ನನಗೆ ಅನಿಸುತ್ತದೆ. ಗೃಹ ರಕ್ಷಣದಳವನ್ನು ಸ್ಥಾಪನೆ ಮಾಡುವುದು ಅಥವಾ ಅದರ ತರಪೇತಿಯನ್ನು ಕೊಡುವುದು ಒಂದು ಉತ್ತಮವಾದ ವ್ಯವಸ್ಥೆ. ಆದರೆ ನಾವು ಏನು ಸಮಸ್ಯೆಯನ್ನು ಎದುರಿಸುತ್ತಾ ಇದ್ದೇವೆಯೋ ಅದಕ್ಕನುಗುಣವಾಗಿ ನಮ್ಮ ತರಪೇತಿ ಇರಬೇಕಾಗುತ್ತದೆ. ಮೈಸೂರು ಸಂಸ್ಥಾನದ ನ್ಯಾಷನಲ್ ಯೂತ್‌ಫ್ರಂಟ್ ಅಂತಹೇಳಿ ಇತ್ತೀಚೆಗೆ ಸ್ಥಾಪಿತವಾಗಿದೆಯಲ್ಲಾ ಆ ಯೂತ್ ಫ್ರಂಟ್ ಮುಂತಾದ ಸಂಘ ಸಂಸ್ಥೆಗಳ ಬೆಂಬಲವನ್ನು ಸಹಕಾರವನ್ನು ಪಡೆದರೆ ಈ ಗೃಹ ರಕ್ಷಕದಳಗಳಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ನಮಗೆ ಅನುಕೂಲವಾಗಬಹುದು ಎಂದು ನಾನು ಅಭಿಪ್ರಾಯಪಡುತ್ತೇನೆ. ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಎನ್. ಸಿ. ಸಿ. ಏನಿದೆ ಅದನ್ನು ಸರ್ವಸಾಮಾನ್ಯವಾಗಿ ಕಡ್ಡಾಯ ಮಾಡಬೇಕೆಂದು ಈ ದಿವಸ ಭಾರತದ ಮಟ್ಟದಲ್ಲಿ ಒಂದು ತೀರ್ಮಾನವನ್ನು ವಿಶ್ವವಿದ್ಯಾನಿಲಯಗಳು ಮಾಡಿವೆ. ನನಗೆ ತಿಳಿದಿರುವ ಮಟ್ಟಿಗೆ ಎನ್. ಸಿ. ಸಿ. ಟ್ರೈನಿಂಗ್ ಕೊಡುವುದಕ್ಕೆ ಸಾಕಾದಷ್ಟು ಸಾಮಗ್ರಿಗಳು ನಮ್ಮ ಹತ್ತಿರ ಇಲ್ಲ. ನನಗೆ ತಿಳಿದಿರುವ ಪ್ರಕಾರ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಸೈನಿಕ ಶಿಕ್ಷಣವನ್ನು ಕಡ್ಡಾಯವಾಗಿ ಪರಿಚಯ ಮಾಡಿಕೊಡಲು ಸಾಕಾದಷ್ಟು ಬಂದೂಕುಗಳು ಇಲ್ಲ. ಯಾವಾಗ ಬಂದೂಕುಗಳು ಇಲ್ಲವೋ ಆಗ ನಾವು ಲಾಠಿಗಳಲ್ಲಿ ಕೊಡತಕ್ಕ ಏನು ಟ್ರೈನಿಂಗ್ ಇದೆ ಅದು ಡ್ರಿಲ್ ಆಗುತ್ತದೆಯೇ ಹೊರತು ಸೈನಿಕ ಶಿಕ್ಷಣ ಎಂದಿಗೂ ಆಗಲಾರದು ಎಂದು ನಾನು ಅಭಿಪ್ರಾಯಪಡುತ್ತೇನೆ. ಆದ್ದರಿಂದ ಈ ಹೋಂ ಗಾರ್ಡ್ಸ್ ವ್ಯವಸ್ಥೆ ಪೋಲೀಸ್ ವ್ಯವಸ್ಥೆಯೊಳಗೆ ಸೇರುತ್ತದೆ. ಅವರಿಗೆ ಇಂಥಾ ಕಷ್ಟ ಬರುವುದಿಲ್ಲ ಎಂದು ನಾನು ಆಶಿಸುತ್ತೇನೆ. ಪೋಲೀಸ್‌ನವರ ಹತ್ತಿರ ಎಷ್ಟು ಬಂದೂಕುಗಳು ಇವೆ, ಇಲ್ಲ ಎನ್ನುವುದು ಗೃಹ ಮಂತ್ರಿಗಳಿಗೆ ಗೊತ್ತಿದೆ. ಗೃಹರಕ್ಷಕದಳದವರಿಗೆ ಹೆಚ್ಚಿನ ರೀತಿಯಲ್ಲಿ ನಮ್ಮ ರಕ್ಷಣಾ ಪ್ರಯತ್ನಗಳಿಗೆ ತಮ್ಮ ಸೇವೆಯನ್ನು ಸಲ್ಲಿಸುವುದಕ್ಕೆ ಅನುಕೂಲಕರವಾದ ವಾತಾವರಣವನ್ನು ನಾವು ಈ ದಿವಸ ಏರ್ಪಾಡು ಮಾಡಬೇಕಾಗಿದೆ. ಆ ದೃಷ್ಟಿಯಿಂದ ನಾನು ಈ ಮಸೂದೆಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ಮಸೂದೆಯನ್ನು ಶಾಶ್ವತವಾಗಿ ನಮ್ಮ ಕಡತದಲ್ಲಿ ಇಟ್ಟಿರುವುದರಿಂದ ಮುಂದೆ ಇಂಥಾ ಆಪತ್ತಿನ ಕಾಲ ಬಂದಾಗ ಈ ರಕ್ಷಣಾದಳದವರನ್ನು ನಮ್ಮ ಸ್ವಾತಂತ್ರ್ಯ ರಕ್ಷಣೆ ಮತ್ತು ದೇಶ ರಕ್ಷಣೆಯ ಕೆಲಸಕಾರ್ಯಗಳಿಗೆ ಉಪಯೋಗಿಸಿಕೊಳ್ಳಬಹುದು ಎನ್ನತಕ್ಕ ಆಶೆಯಿಂದ ಮತ್ತೊಮ್ಮೆ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

†ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಸ್ವಾಮಿ ಈ ಗೃಹ ರಕ್ಷಕ ಬಿಲ್ಲು ಏನಿದೆ ಇದನ್ನು ಈವತ್ತು ನಮ್ಮ ಗೃಹ ಸಚಿವರು ಒಂದು ವಿಧೇಯಕದ ಮುಖಾಂತರ ಕಾನೂನು ಮಾಡಬೇಕೆಂದು ಹೇಳಿ ನಮ್ಮ ರಾಜ್ಯದ ಒಂದೇ ಒಂದು ಭಾಗದಲ್ಲಿ ಇದ್ದಂಥಾ ಕಾನೂನನ್ನು ರಾಜ್ಯದ ಎಲ್ಲಾ ಭಾಗಕ್ಕೂ ಅನ್ವಯವಾಗುವ ರೀತಿಯಲ್ಲಿ ತಂದಿರುವುದು ನಿಜವಾಗಿಯೂ ಕೂಡ ಸ್ವಾಗತಾರ್ಹವಾದದ್ದು. ಇದನ್ನು ಈ ಸಭೆಯಲ್ಲಿ ನಾನು ಅನೇಕ ಬಾರಿ ಆಯವ್ಯಯ ಪಟ್ಟಿಯ ಮೇಲೆ ಚರ್ಚೆ ಮಾಡುತ್ತ ಇದ್ದಾಗ, ಹೋಂಗಾರ್ಡ್ ಇರಬಾರದು, ತೆಗೆದು ಹಾಕಬೇಕೆಂದು ಹೇಳಿ ಉತ್ತರ ಕರ್ಣಾಟಕದ ಭಾಗದಿಂದ ಬಂದಂಥಾ ಸದಸ್ಯರು ಹೇಳಿದ ವಿಷಯವೂ ಕೂಡ ನೆನಪಾಗುತ್ತಿದೆ. ಈಗ ಎರಡು ವರ್ಷದ ಕೆಳಗೆ ಹೋಂಗಾರ್ಡ್ ಬೇಡ, ಇದರ ಮೇಲೆ ಹಣ ಖರ್ಚಾಗುವುದು ಬೇಡ. ಇವರು ಇದ್ದರೆ ಊರು ಊರಿನಲ್ಲಿ ರಾಜಕೀಯವಾಗುತ್ತದೆ ಎಂದು ಆ ಕಡೆಯಿಂದ ಬಂದಂಥ ಶಬ್ದ ಹೋಗಿ ಇವತ್ತು ಅವರೂ ಕೂಡ ಈ ವಿಷಯ ಪ್ರತಿಪಾದನೆ ಮಾಡುತ್ತಾ ಇರುವುದು ಸಂತೋಷದ ವಿಷಯ. ದೇಶದ ಎಲ್ಲಾ ಜನರನ್ನೂ ತರಪೇತು ಮಾಡತಕ್ಕ ಒಂದು ವಾಲಂಟರಿ ಕೋರ್ಸ್ ಇರುವುದು ಸರಿ ಎಂದು ಈವತ್ತಿನ ದಿವಸ ಜನರ ಮುಖಂಡರಿಂದ ಹಿಡಿದು ಸರ್ಕಾರದವರೆಗೆ ಎಲ್ಲರೂ ತೀವ್ರವಾಗಿ ಯೋಚನೆ ಮಾಡಿ ಈ ಸಭೆ ಅಧಿವೇಶನ ಇಲ್ಲದೇ ಇರುವಾಗ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಒಂದು ಆರ್ಡಿನೆನ್ಸ್ ಮುಖಾಂತರ ಇದನ್ನು ತಂದಿರುವುದು ನೋಡಿದರೆ ನಿಜವಾಗಿಯೂ ಕೂಡ ಅವರ ಕೈಯಲ್ಲಿ 6-7 ವರ್ಷಗಳಲ್ಲಿ ಏನು ಮಾಡುವುದಕ್ಕೆ ಆಗದಿದ್ದರೂ ಕೂಡ ಇದು ಒಂದನ್ನಾದರೂ ಮಾಡುವುದಕ್ಕೆ ಶಕ್ತಿ ಉಂಟಾಯಿತಲ್ಲಾ ಎಂದು ಸಂತೋಷಪಡಬೇಕಾಗಿದೆ. ದೇಶದಲ್ಲಿ ಪುಂಡರು, ಪೋಕರಿಗಳು, ಸಮಾಜ ದ್ರೋಹಿಗಳು ಇರುವಾಗ ಏನಾದರೂ ಉತ್ತಮರ ಮೇಲೆ, ಯೋಗ್ಯರ ಮೇಲೆ ಪುಂಡಾಟ ನಡೆಸತಕ್ಕ ಸಂದರ್ಭ ಬಂದೀತು, ಅಂಥಾ ಎಲ್ಲಾ ಕಂಟಿನ್‌ಜೆನ್ಸಿಗೂ ಜನ ತಯಾರಾಗಿರಬೇಕು, ಯುದ್ಧಕ್ಕೆ ಹೋಗುವುದಕ್ಕೆ' ದೇಶ ರಕ್ಷಣೆ ಮಾಡುವುದಕ್ಕೆ ಅಂತ ಹೇಳಿ ಸರ್ಕಾರ ಯೋಚನೆ ಮಾಡಿದ್ದು ಇದು ಒಂದು ಮಾತ್ರ. ಇದಕ್ಕೆ ಅವರಿಗೆ ಮೈಸೂರಿನ 2ಕೋಟಿ 35 ಲಕ್ಷ ಜನ ನಿಜವಾಗಿಯೂ ಕೂಡ ಶಹಬಾಸ್ ಎಂದು ಹೇಳಬೇಕಾಗುತ್ತದೆ. ಆರ್ಡಿನೆನ್ಸ್ ತೆಗೆದುಕೊಂಡು ಬಂದರು. ಕಾಯಿದೆ, ಕಾನೂನು ಮಾಡಿ ಸ್ಟ್ಯಾಚ್ಯುಟ್‌ಬುಕ್ ಮೇಲೆ ಇಡಬೇಕೆಂದರು. ಇದುವರೆಗೂ ಈ ದಾರಿಯಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದರೆ ಪತ್ರಿಕೆಗಳಲ್ಲಿ ಸ್ಟೇಟ್‌ಮೆಂಟ್ ಬಂದಿವೆ. 10 ಸಾವಿರ ಹೋಂಗಾರ್ಡ್ಸ್ ಮಾಡುತ್ತೇವೆ. 12 ಸಾವಿರ ಹೋಂಗಾರ್ಡ್ಸ್ ಮಾಡುತ್ತೇವೆ. ಒಬ್ಬರು ನಾನ್ ಅಫೀಷಿಯಲ್ ಮೆಂಬರನ್ನೂ ಅದಕ್ಕೆ ಕಮ್ಯಾಂಡೆಂಟ್ ಆಗಿ ಮಾಡುತ್ತೇವೆ ಅಂತ ಹೇಳಿ ಅನೇಕ ಊಹಾ ಪೋಹಗಳಿಗೆ ಎಡೆ ಕೊಟ್ಟಾಗಿದೆ. ಈ ಕೆಲಸ ಪೂರ್ತಿ ಆದಮೇಲೆ ಯಾರನ್ನಾದರೂ ಕಮ್ಯಾಂಡೆಟ್ ಆಗಿ ಮಾಡಿ, ಸ್ವಲ್ಪ ದೃಢಕಾಯರಾಗಿರತಕ್ಕವರು. ಭೀಮಕಾಯರು ಅಂಥವರನ್ನು ಅಂಥಾ ಕಡೆ ಇಟ್ಟು ಅವರ ಕೈಯಲ್ಲಿ ಇಂಥಾ ಒಂದು ಅಧಿಕಾರ ಕೊಡಿ. ಇಲ್ಲದೇ ಹೋದರೆ ಚಟಾಕಿ, ಪಟಾಕಿ ಹಾರಿಸತಕ್ಕ ಕೊಳಕೇಬೈಲ್ ಅವರನ್ನಾದರೂ ಕಮ್ಯಾಂಡೆಂಟ್ ಆಗಿ ಮಾಡಿ. ಏಕೆಂದರೆ ಅವರ ಕೈಯಲ್ಲಿ ಅದು ಆಗುತ್ತದೆ. ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಭಾಷಣ ಬಿಗಿಯುತ್ತಾ ಜನರನ್ನು ತಮ್ಮ ಕಡೆಗೆ ಎಳೆಯುತ್ತಾರೆ. ಅಂಥಾ ಶಕ್ತಿ ಸಾಮರ್ಥ್ಯ ಅವರಿಗೆ ಇದೆ.

Mr. SPEAKER. Do you require some time more ?

Sri C. J. MUCKANNAPPA.—Yes sir, another five minutes.

Mr. SPEAKER. The house will now rise and meet after half an hour.

The house adjourned for recess at three of the Clock and re-assembled at thirty five miuntes past three of the Clock.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ —ಈ ಹೋಂಗಾರ್ಡ್ಸ್ ಬಿಲ್ಲನ್ನೆಲ್ಲಾ ತಿರುಗಿಸಿದರೂ ಎಷ್ಟು ಸಾವಿರ ಜನರನ್ನು ತೆಗೆದುಕೊಳ್ಳುತ್ತಾರೆಂಬುದು ಎಲ್ಲೂ ಕಾಣಿಸಲಿಲ್ಲ. ಇದಕ್ಕಾಗಿ 7·20 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಏಕೆ ಇಷ್ಟು ಕೇಳಿರುವುದು. 20 ಟ್ರೈನಿಂಗ್ ಸೆಂಟರ್ಸ್ ಇಟ್ಟುಕೊಳ್ಳಬೇಕೆಂದಿದ್ದಾರೆ. ಈ 20 ಸ್ಥಳಗಳಲ್ಲಿ ಎಷ್ಟು ಜನರಿಗೆ ಟ್ರೈನಿಂಗ್ ಕೊಡಲಾಗುವುದು, ಎಷ್ಟು ಸಾವಿರ ಜನರನ್ನು ತೆಗೆದುಕೊಳ್ಳಲಾಗುವುದು ಎಂದು ಎಲ್ಲೂ ಹೇಳಿಲ್ಲ. ಮೋಡ್ ಆಫ್ ಪೇಮೆಂಟ್, ಅವರ ಫಂಕ್ಷನ್, ಅವರ ಹತೋಟಿ ವಿಷಯ ಅವರಿಗೆ ಹೇಗೆ ರಕ್ಷಣೆ ಕೊಡಬೇಕು ಎಂಬುದನ್ನು ಮಾತ್ರ ನಮೂದಿಸಿ ಮಿಕ್ಕ ವಿಷಯಗಳನ್ನೆಲ್ಲಾ ಬಿಟ್ಟಿದ್ದಾರೆ.

ಆರನೆಯ ಕ್ಲಾಜಿನಲ್ಲಿ ಹೋಂಗಾರ್ಡ್ಸ್‌ನ ಒಬ್ಬ ಮೆಂಬರಿಗೆ ಪೋಲೀಸ್ ಆಫೀಸರಿಗಿರುವಷ್ಟು ಅಧಿಕಾರವಿರಬೇಕೆಂದು ನಮೂದಿಸಿದ್ದಾರೆ. ಅಂದರೆ ಯಾವ ವಿಧವಾದ ಪವರ್ಸ್, ಸಬ್‌ಇನ್ಸ್‌ಪೆಕ್ಟರು, ಎ.ಎಸ್.ಪಿ. ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರು, ಡಿ. ಎಸ್. ಪಿ. ಮುಂತಾದವರಲ್ಲಿ ಯಾರಿಗೆ ಇರುವ ಅಧಿಕಾರ ಅವರಿಗೆ ಇರುತ್ತದೆ ಎಂಬುದು ಅರ್ಥವಾಗಿಲ್ಲ. ಈಗ ಒಬ್ಬ ಸಬ್‌ಇನ್ಸ್‌ಪೆಕ್ಟರು ತಪ್ಪು ಮಾಡಿದರೆ ಆತನನ್ನು ಪ್ರಾಸಿಕ್ಯೂಟ್ ಮಾಡಬಹುದು. ಅದಕ್ಕೆ ಸರ್ಕಾರದ ಅನುಮತಿ ಬೇಕಾಗಿಲ್ಲ. ಅದೇ ಒಬ್ಬ ಹೋಂಗಾರ್ಡ್ ಸರ್ಕಲ್ ಇನ್ಸ್‌ಪೆಕ್ಟರಿಗೆ ಕ್ಲಾಜ್ 6 (2) ರ ಪ್ರಕಾರ ರಕ್ಷಣೆಯಿದೆ. ಇದು ಸರಿಯೆ ಎಂಬ ಅನುಮಾನವಿದೆ. ಅಷ್ಟು ಅಧಿಕಾರವಿರುವುದು ಸರಿಯಲ್ಲವೆಂದು ಕಾಣುತ್ತದೆ. ಇದನ್ನು ಸರ್ಕಾರದವರು ಮನದಟ್ಟು ಮಾಡಿಕೊಡಬೇಕು. ಪೈಲಟ್ ಮಾಡುವಾಗ ಗೃಹ ಸಚಿವರು ಈ ವಿಷಯ ಹೇಳಲಿಲ್ಲ. ಆರನೆಯ ಕ್ಲಾಜಿನ ಎರಡನೆಯ ಸಬ್ ಕ್ಲಾಜಿನಲ್ಲಿ ಹೇಳಿರುವುದು ಮತ್ತು 13ನೆಯ ಕ್ಲಾಜಿನಲ್ಲಿರುವುದೂ ನೋಡಿದರೆ ಎರಡೂ ಕ್ಲ್ಯಾಷ್ ಆಗುವ ಹಾಗೆ ಕಾಣುತ್ತದೆ. 13ನೆಯ ಕ್ಲಾಜಿನ ಪ್ರಕಾರ ಪಬ್ಲಿಕ್ ಸರ್ವೆಂಟ್ಸ್ ಎಂದು ಹೋಂಗಾರ್ಡುಗಳು ಪರಿಗಣಿಸಲ್ಪಡುತ್ತಾರೆ. ಅವರಿಗೆ ತೊಂದರೆಯಾದರೆ ಸರ್ಕಾರಿ ನೌಕರರಿಗೆ ಕೊಡುವ ರಕ್ಷಣೆಯನ್ನೆಲ್ಲಾ ಕೊಡಬೇಕಾಗುತ್ತದೆ.

ಹೋಂ ಗಾರ್ಡ್‌ಗಳು ತಪ್ಪು ಮಾಡಿದರೆ ಅವರನ್ನು ಪ್ರಾಸಿಕ್ಯೂಟ್ ಮಾಡಬೇಕಾದರೆ ಮೊದಲು ಅನುಮತಿ ಪಡೆಯಬೇಕೆಂದು ಆರನೆಯ ಕ್ಲಾಜಿನಲ್ಲಿ ನಮೂದಿಸಿದ್ದಾರೆ. ಎಷ್ಟೋ ಸಂದರ್ಭಗಳಲ್ಲಿ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರು ತಪ್ಪುಮಾಡಿದಾಗ ಆತನನ್ನು ಪ್ರಾಸಿಕ್ಯೂಟ್ ಮಾಡಲು ಅನುಮತಿ ಕೇಳಿದಾಗ ಸರ್ಕಾರದವರು ಟರ್ನ್‌ಡೌನ್ ಮಾಡಿದ್ದಾರೆ. ಸಾರ್ವಜನಿಕ ಶಿಸ್ತಿಗೆ ಭಂಗ ಬಾರದಿರುವ ಹಾಗೆ ಹೋಂಗಾರ್ಡ್‌ಗಳು ನಡೆದುಕೊಳ್ಳಬೇಕಾಗಿದೆ. ಯಾರಾದರೂ ಆಗದವರು ಬೀದಿಯಲ್ಲಿ ಬರುವಾಗ ಹೋಂಗಾರ್ಡ್ ಅವರಿಗೆ ಎರಡು ಬಿಗಿದು ಅಪಾಯ ಮಾಡಿದರೆ ಆಗ ಆ ಗಾರ್ಡನ್ನು ಏನೂ ಮಾಡುವುದಕ್ಕಾಗುವುದಿಲ್ಲ. ಅಂಥ ಸಂದರ್ಭ ಬಾರದಿರಬಹುದು. ಒಂದುಪಕ್ಷ ಬಂದರೆ ಶಿಕ್ಷಿಸಲು ಅವಕಾಶವಿರುವಂತೆ ಪ್ರಿಕಾಷನರಿ ಮೆಷರ್ಸ್ ಇಟ್ಟುಕೊಂಡು ಬೇಕಾದ ಉಪಯೋಗ ಮಾಡಿಕೊಳ್ಳಲು ಅವಕಾಶ ಮಾಡುವುದು ಒಳ್ಳೆಯದು. ಸಾರ್ವಜನಿಕರಿಗೆ ಹೋಂಗಾರ್ಡ್ ತೊಂದರೆ ಮಾಡಿದರೆ ಪ್ರಾಸಿಕ್ಯೂಟ್ ಮಾಡಲು ಯಾರ ಅನುಮತಿಯನ್ನು ಪಡೆಯಬೇಕಾಗಿಲ್ಲ ಎಂದು ಹೇಳುವುದು ಸೂಕ್ತ. ಆಗದವರು ಯಾರಾದರೂ ಇದ್ದರೆ ಅವರು ಹೋಂಗಾರ್ಡುಗಳನ್ನು ಕೋರ್ಟಿಗೆ ಎಳೆಯುವುದಾದರೆ ಆಬ್ಜೆಕ್ಟ್ ಅಚೀವ್ ಆಗುವುಲ್ಲ ಎಂದು ತಾವು ಹೇಳಬಹುದು. ಅದಕ್ಕೆ ಅಂಥ ಗ್ರೇವ್ ಅಫೆನ್ಸ್ ಮಾಡಿದಾಗ ಹೋಂಗಾರ್ಡನ್ನು ಪ್ರಾಸಿಕ್ಯೂಟ್ ಮಾಡಲು previous sanction ತೆಗೆದುಕೊಳ್ಳಬೇಕೆಂದು ವಿಧಾಯಕ ಮಾಡಿರುವುದು ಎಂದು ಹೇಳಬಹುದು. ಆದರೆ ಅದು ಅಷ್ಟು ಸಮಂಜಸವಲ್ಲ. ಏಕೆಂದರೆ ಹಿಂದೆ ಯುದ್ಧ ನಡೆಯುವಾಗ ಮೈಸೂರು ಸಂಸ್ಥಾನದಲ್ಲಿ ಎ. ಆರ್. ಪಿ. ಗೆ ಸಂಬಂಧಪಟ್ಟಂತೆ ರಕ್ಷಣೆಗಾಗಿ ಕೆಲವು ಗಾರ್ಡ್ಸ್ ನೇಮಿಸಿದ್ದರು. ಆಗ ಅನೇಕ ಸಂದರ್ಭಗಳಲ್ಲಿ ಅಧಿಕಾರ ದುರುಪಯೋಗವಾಯಿತು. ಆದುದರಿಂದ ಗೃಹಸಚಿವರು ಕಣ್ಣಲ್ಲಿ ಕಣ್ಣಿಟ್ಟು ನೋಡಿ ಇದರಿಂದ ಅನಾಹುತವೇನೂ ಆಗದ ಹಾಗೆ ವ್ಯವಸ್ಥೆ ಕೊಡಬೇಕಾದ್ದು ಆವಶ್ಯಕ. ಒಂದು ಕಡೆ ಅನಾಹುತವಾದರೇನು ಎಂದು ಸುಲಭವಾಗಿ ಏನಾದರೂ ಹೇಳಿ ಜಾರಿಕೊಳ್ಳಬಾರದು.

ಅವರಿಗೆ ಬಂದೂಕ, ಯೂನಿಫಾರಂ, ಎಲ್ಲವನ್ನೂ ಕೊಟ್ಟಿದ್ದು ಅವರನ್ನು ಡಿಸ್‌ಮಿಸ್ ಮಾಡಿದರೆ, ಇದನ್ನೆಲ್ಲಾ ಯಾರು ಅವರಿಂದ ಕಿತ್ತುಕೊಳ್ಳಬಹುದು, ಯಾರು ವಾರಂಟ್ ಕಳುಹಿಸಿ ಇವರನ್ನು ಕರೆತರಬಹುದು ಇವುಗಳನ್ನೆಲ್ಲಾ ಸ್ಪಷ್ಟಪಡಿಸಬೇಕು. ಒಟ್ಟಿನಲ್ಲಿ ಇವರು ಜನರಿಗೆ ತೊಂದರೆ ಮಾಡದಂತೆ ಮಾಡಬೇಕು.

ಅವರು ಎಷ್ಟು ಹೊತ್ತಿನವರೆಗೆ ಹೋಂಗಾರ್ಡ್‌ಗಳು, ಎಷ್ಟು ಹೊತ್ತಿನಲ್ಲಿ ಅಲ್ಲ ಎಂಬ ವಿಷಯವೂ ಇದೆ. ಎಲ್ಲಿಯವರೆಗೆ ಅವರಲ್ಲಿ ಸರ್ಟಿಫಿಕೇಟ್ ಇರುತ್ತದೆ, ಎಲ್ಲಿಯವರೆಗೆ ಅವರನ್ನು ಸಸ್ಪೆಂಡ್ ಮಾಡಿರುವುದಿಲ್ಲ ಅಥವಾ ಡಿಸ್‌ಮಿಸ್ ಮಾಡಿರುವುದಿಲ್ಲ ಅಲ್ಲಿಯವರೆಗೆ ಅವರು ಹೋಂಗಾರ್ಡ್‌ಗಳೆಂತಲೆ ಅಥವಾ ಸರ್ಟಿಫಿಕೇಟ್ ಇರುವವರೆಗೂ ಅವರು ಏನು ಬೇಕಾದರೂ ಮಾಡಬಹುದೆ? 13 ನೆಯ ಕ್ಲಾಜಿನಲ್ಲಿ "The members of the Home guards acting under this ordinance shall be deemed to be public servants within the meaning of Section 21 of the Indian Penal Code" ಎಂದಿದೆ. ಇದು ಎಷ್ಟು ದಿನಗಳವರೆಗೆ? ಅವರು ತಮ್ಮ ಕರ್ತವ್ಯವನ್ನು ಮಾಡುವಾಗ ಯಾರಾದರೂ ಅಡ್ಡಿ ಆತಂಕಗಳನ್ನೊಡ್ಡಿದರೆ ಆಗ ನೀವು ಹೇಳುವುದನ್ನು ಒಪ್ಪುತ್ತೇವೆ. ಆದರೆ ಅವರು ಬೀದಿಯಲ್ಲಿ ಹೋಗುವಾಗ, ಹೋಟೆಲಿನಲ್ಲಿ ಕಾಫಿ ಕುಡಿಯುತ್ತಿರುವಾಗ ಯಾವುದಾದರೂ ವ್ಯವಹಾರ, ವ್ಯಾಜ್ಯ ನಡೆದರೆ ಆಗಲೂ ಕೂಡ ಅವರು ಹೋಮ್ ಗಾರ್ಡುಗಳೆಂತಲೆ?

ಶ್ರೀ ಆರ್. ಎಂ. ಪಾಟೀಲ್.—'When they are on duty' ಎಂದು ಇದರಲ್ಲಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—13 ನೆಯ ಕ್ಲಾಜಿನಲ್ಲಿ ಇವರು ಯಾವಾಗಲೂ ಸಾರ್ವಜನಿಕ ಸೇವಕರೆಂದಿದೆ, ಇದು ನನಗೆ ಅರ್ಥವಾಗಿಲ್ಲ, ಇದನ್ನು ವಿಶದೀಕರಿಸಬೇಕು.

ನನ್ನ ಸ್ನೇಹಿತರಾದ ಶ್ರೀವರ್ಮ ಕೃಷ್ಣ ಅವರು ಹೇಳಿದಂತೆ ಇದನ್ನು 20 ಜಾಗಗಳಲ್ಲಿ ರಚನೆ ಮಾಡಿದರೆ ಸಾಲುವುದಿಲ್ಲ. ದೇಶದಲ್ಲಿ ತುರ್ತುಪರಿಸ್ಥಿತಿಯಿರುವಾಗ ಹೆಚ್ಚು ಜನರಿಗೆ ಶಿಕ್ಷಣ ಕೊಡಲು ಹಿಂದು ಮುಂದು ನೋಡಬಾರದು. ದೇಶದ ರಕ್ಷಣೆ ಸರ್ಕಾರದ ಕೈಯ್ಯಲ್ಲಿದೆ, ಯಾವಾಗಲಾದರೂ ಅಪಾಯ ಸಂಭವಿಸಬಹುದು; ಪೋಲೀಸರನ್ನು ಬೇರೆಕಡೆ ಕಳುಹಿಸಿದರೆ, ರಕ್ಷಣೆಗೆ ಇವರಿರಬೇಕು. ಎಷ್ಟು ಕೇಂದ್ರಗಳನ್ನು ಮಾಡುತ್ತಾರೆ, ಒಂದೊಂದು ಕೇಂದ್ರದಲ್ಲಿ ಎಷ್ಟು ಜನರಿಗೆ ಶಿಕ್ಷಣ ಕೊಡುತ್ತಾರೆಂಬುದನ್ನು ತಿಳಿಸಬೇಕು. ಎಲ್ಲ ಕಡೆಯೂ ಎಲ್ಲ ಊರುಗಳಲ್ಲಿಯೂ ಹೋಮ್‌ಗಾರ್ಡ್‌ಗಳಿರಬೇಕು, ಎರಡು ಅಥವಾ ಮೂರುಸಾವಿರದ ಮೇಲೆ ಜನಸಂಖ್ಯೆ ಇರುವ ಕಡೆಯೆಲ್ಲ ಹೋಮ್‌ಗಾರ್ಡ್‌ಗಳಿರಬೇಕು. ಸರ್ಕಾರದ ವಿವೇಚನೆಗೆ ಬಿಟ್ಟಿದ್ದರೂ ಅದನ್ನು ಇದರಲ್ಲೇ ಅಡಕ ಮಾಡಿದ್ದರೆ ಚೆನ್ನಾಗಿತ್ತು, ಈ ತುರ್ತು ಪರಿಸ್ಥಿತಿಯಲ್ಲಿ ಎಲ್ಲಕ್ಕಿಂತ ಅತ್ಯುತ್ತಮವಾದ ಇಂಥ ಕೆಲಸ ಮಾಡುವುದು ಅತ್ಯಗತ್ಯ. ಇದಕ್ಕೆ ಏಳುಲಕ್ಷವಲ್ಲ ಹದಿನೇಳು ಲಕ್ಷ ಖರ್ಚಾಗಲಿ; ದೇಶದಲ್ಲಿರುವ ಎಲ್ಲರಿಗೂ ಸಿಪಾಯಿಗಿರುವ ಧೈರ್ಯ ಸ್ಥೈರ್ಯ ಉಂಟಾಗುವುದು ಅಗತ್ಯ. ಇಂಥ ಕೆಲಸಕ್ಕೆ ಕೈಹಾಕಿರುವ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಇದಕ್ಕೆ ಹಣಕಾಸಿನ ಅಡ್ಡಿ ಆತಂಕವನ್ನು ನೋಡಬಾರದು. ಅಂಥ ಕಡೆ ಇಂಥ ಕಡೆ ಎಂದು ನೋಡಬಾರದು. ಹತ್ತು ಸಾವಿರ ರಕ್ಷಣಾ ದಳದವರಿಗೆ ಕೂಡಲೇ ಶಿಕ್ಷಣ ಕೊಟ್ಟು, ದೇಶಾದ್ಯಂತ ಎಲ್ಲರಿಗೂ military mind ಬೆಳೆಯುವಂತೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನಂಬಿ ನಾನು ಈ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

†ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸ್ವಾಮಿ, ಈ ಗೃಹ ರಕ್ಷಣಾದಳದ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಈ ದಳಕ್ಕೆ ಜನರನ್ನು ಸೇರಿಸಬೇಕಾದರೆ ಸರ್ಕಾರದವರು ಬಹಳ ಎಚ್ಚರಿಕೆಯಿಂದಿರಬೇಕು. ಸಮಾಜ ಘಾತುಕರನ್ನೂ ದೇಶಪ್ರೇಮವಿಲ್ಲದಿರುವವರನ್ನೂ ಇದಕ್ಕೆ ಸೇರಿಸದಿರುವಂತೆ ಮಾಡಲೇಬೇಕು. ಯಾವ ಮನುಷ್ಯ ಇದರಲ್ಲಿ ಸೇರಬೇಕಾದರೂ

(ಶ್ರೀ ಬಿ. ಎಲ್. ಗೌಡ).

ಅವನ ಪೂರ್ವೇತಿಹಾಸವನ್ನು ಚೆನ್ನಾಗಿ ತಿಳಿದುಕೊಂಡು, ಸಿ. ಐ. ಡಿ. ಮೂಲಕ ಅವನು ದೇಶಪ್ರೇಮಿಯೆ ಅಥವಾ ರಾಷ್ಟ್ರಘಾತುಕನೆ ಎಂಬುದನ್ನು ತಿಳಿದು ನಂತರ ಸೇರಿಸಬೇಕು. ಏಕೆಂದರೆ, ಅನೇಕ ಜನ ರಾಷ್ಟ್ರದ್ರೋಹಿಗಳು ಸೈನ್ಯದಲ್ಲಿ ಸೇರಿಕೊಂಡು ಅನಾಹುತಮಾಡಿದರೆಂದು ನಮಗೆ ವರ್ತಮಾನ ಬಂದಿದೆ. ಆದುದರಿಂದ ಇದಕ್ಕೆ ಸೇರಿಸಬೇಕಾದರೆ ಬಹಳ ಜಾಗರೂಕತೆಯಿಂದಲೂ ವಿಚಕ್ಷಣೆಯಿಂದಲೂ ಇರಬೇಕು. ರಾಷ್ಟ್ರದ್ರೋಹಿಗಳು ಸೇರಿಕೊಂಡರೆ ಅಂಥವರಿಗೆ ಶಿಕ್ಷೆ ವಿಧಿಸುವುದಕ್ಕೆ ಇದರಲ್ಲಿ ಯಾವ ಕ್ಲಾಜಿನಲ್ಲಿಯೂ ಅವಕಾಶಮಾಡಿಕೊಂಡಿಲ್ಲ. ಇಂಥವರನ್ನು ಶಿಕ್ಷೆಗೆ ಗುರಿಮಾಡಲು ಒಂದು ಕ್ಲಾಜನ್ನು ಸೇರಿಸಬೇಕೆಂದು ಭಿನ್ನೈಸುತ್ತೇನೆ.

MR. R. M. PATIL.—Please see clause 9.

ಶ್ರೀ ಬಿ. ಎಲ್. ಗೌಡ.—ಅದೇ ಬೇರೆ. ದೇಶದ್ರೋಹಿಗಳಿಗೆ ಉಗ್ರವಾದ ಶಿಕ್ಷೆ ವಿಧಿಸಬೇಕಾದುದು ನ್ಯಾಯ.

ಕಮಾಂಡೆಂಟುಗಳಾಗಿ ಸರ್ಕಾರಿ ಅಧಿಕಾರಿಗಳನ್ನು ನೇಮಿಸುತ್ತಾರೋ ಅಥವಾ ಖಾಸಗಿಯವರನ್ನು ನೇಮಕಮಾಡುತ್ತಾರೊ ಅರ್ಥವಾಗುವುದಿಲ್ಲ. ಖಾಸಗಿಯವರನ್ನು ನೇಮಕ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಏಕೆಂದರೆ, ಇದು voluntary organisation ಆಗಿರುವುದರಿಂದ ಹೀಗೆ ಮಾಡುವುದೊಳ್ಳೆಯದು.

ಅವರಿಗೆ ಕರ್ತವ್ಯಗಳನ್ನು ನೇಮಕಮಾಡಬೇಕಾದರೆ ಏನು ಕೆಲಸಗಳನ್ನು ಅವರಿಗೆ ಕೊಡುತ್ತಾರೆಂದು ವಿಶದೀಕರಿಸಿದ್ದರೆ ಚೆನ್ನಾಗಿತ್ತು.

10ನೆಯ ಕ್ಲಾಜಿನಲ್ಲಿ ಅಶಿಸ್ತಿಗೆ ಅಥವಾ ಕರ್ತವ್ಯಲೋಪಕ್ಕೆ ಶಿಕ್ಷೆ ವಿಧಾಯಕವಾಗಿದೆ. ಜುಲ್ಮಾನೆ ಅಥವಾ ಜೈಲು ಶಿಕ್ಷೆ ಎಂದಿದೆ. ದೇಶದಲ್ಲಿ ಶಿಸ್ತು ಮತ್ತು ಸಂಘಟನೆ ಆಗಬೇಕಾದರೆ ಶಿಕ್ಷೆ ಮುಖ್ಯವಾಗಿರಬೇಕು. ಇದಕ್ಕೆ ಸಂಬಂಧಪಟ್ಟ ಅಪರಾಧಗಳಿಗೆ ಬರಿಯ ಜುಲ್ಮಾನೆ ಸಾಲದು. ಶಿಸ್ತನ್ನು ತರಬೇಕಾದರೆ ಶಿಕ್ಷೆ ಉಗ್ರವಾಗಿರಬೇಕು. ರಾಷ್ಟ್ರ ರಕ್ಷಣಾದಳವೆಂಬುದು ಬಹಳ ಮುಖ್ಯವಾದುದು. ಯಾವಾಗಲಾದರೂ ಇದರಲ್ಲಿ ಆಲಸ್ಯದಿಂದ ಕಾನೂನು ಉಲ್ಲಂಘನೆ ಮಾಡಿದವರಿಗೇ ಉಗ್ರವಾದ ಶಿಕ್ಷೆಯಿರಬೇಕು. ಇದರಲ್ಲಿ fine or imprisonment ಎಂದಿದೆ. ಬರಿಯ imprisonment ಎಂದಿರಬೇಕು. ಇದೇ ರೀತಿ 11ನೆಯ ಕ್ಲಾಜಿನಲ್ಲಿ ಬರಿಯ ಜುಲ್ಮಾನೆ ಎಂದಿದೆ. ಅಧಿಪತಿಗಳಾಗಿರುವವರು ತಪ್ಪು ಮಾಡಿದರೆ disciplinary action ಎಂದರೆ, ಅದು ಸಾಲದು; rigorous imprisonment ಕೊಡುವುದೊಳ್ಳೆಯದು. 12ನೆಯ ಕ್ಲಾಜಿನ ಪ್ರಕಾರ ಸರ್ಕಾರ ರೂಲ್ಸ್ ಮಾಡುವ ಅಧಿಕಾರವಿದೆ. ಆ ರೂಲ್ಸ್‌ನಲ್ಲಿ ಗೃಹ ರಕ್ಷಣಾ ದಳದವರು ರಾಜಕೀಯ ಉದ್ದೇಶಗಳಿಗಾಗಿ ತಮ್ಮ ಅಧಿಕಾರಗಳನ್ನು ಉಪಯೋಗಮಾಡಿಕೊಳ್ಳುವುದನ್ನು ತಡೆಯುವ ರೀತಿಯಲ್ಲಿ ನಿಬಂಧನೆಯನ್ನು ಮಾಡಲೇಬೇಕು. ಹಾಗಿಲ್ಲದಿದ್ದರೆ ದುರುಪಯೋಗಮಾಡಿಕೊಳ್ಳುತ್ತಾರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಒಂದಕ್ಕಿಂತ ಹೆಚ್ಚು ಪಕ್ಷಗಳವರಿದ್ದರೆ ಆಗ ಸರಿಯಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಯಾರಾದರೂ ಸೇರಿಕೊಂಡ ಮೇಲೆ ರಾಜಕೀಯ ಸಾಧನೆಯ ಉದ್ದೇಶಕ್ಕಾಗಿ ಕೆಲಸಮಾಡಬಾರದು. ಇಂಥದನ್ನು ವಿರೋಧಿಸಿ ಸರಿಯಾದ ಕಾನೂನು ಮಾಡಬೇಕೆಂದು ನಾನು ಹೇಳುತ್ತೇನೆ. ನಮಗೊಂದು ವರ್ತಮಾನ ಬಂದಿದೆ. ಈಗಿನ ಬೊಂಬಾಯಿ ಕರ್ಣಾಟಕದಲ್ಲಿರತಕ್ಕ ಗೃಹ ರಕ್ಷಣಾದಳದವರು ಪೋಲೀಸಿನವರೇ ಸಮಾಜಘಾತುಕ ಕೆಲಸಗಳನ್ನು ಮಾಡುತ್ತಿದ್ದಾರೆ. ಇದು ಖಂಡಿತವಾಗಿ ಆಗಬಾರದು. ಇಡೀ ಸಂಸ್ಥಾನದಲ್ಲಿ ಈ ಗೃಹ ರಕ್ಷಣಾ ದಳದವರನ್ನು ನೇಮಿಸುವ ಒಂದು ಕಾರ್ಯ ವ್ಯಾಪಿಸಬೇಕು. ಆ ರೀತಿ ಒಂದು ಕಾನೂನನ್ನು ಕೂಡಲೇ ಮಾಡಬೇಕು. ಅವರು ದೇಶದ ಹಿತದೃಷ್ಟಿಯನ್ನು ತಮ್ಮ ಗಮನದಲ್ಲಿಡಬೇಕು. ಆ ರೀತಿಯಾದಂಥ ಗೃಹ ರಕ್ಷಣಾ ದಳದವರನ್ನು ನೇಮಕಮಾಡಬೇಕೇ ಹೊರತು ಅವರು ಸಮಾಜಘಾತುಕರಾಗಲು ಅವಕಾಶ ಕೊಡಬಾರದು ಎಂಬುವಾಗಿ ನಾನು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಂತಹ ಶಿಕ್ಷಣ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಆಗಬೇಕು. ನಮ್ಮ ದೇಶದಲ್ಲಿ ನಾವು ಗಾಂಧಿ ಶಿಷ್ಯರೆನಿಸಿಕೊಂಡಮೇಲೆ ಅವರ ಶಾಂತಿ, ಅಹಿಂಸೆ ತತ್ವಗಳನ್ನು ಚೆನ್ನಾಗಿ ಅನುಸರಿಸುತ್ತಾ ಇರುವ ಹಾಗೆ ಶಿಸ್ತನ್ನು ಸಹ ನಾವು ಗಣನೆಗೆ ತೆಗೆದುಕೊಳ್ಳಬೇಕು. ಆ ಶಿಸ್ತನ್ನು ನಾವು ಪೂರ್ಣ ಮಾಡುತ್ತಿಲ್ಲ. ಆ ಶಿಸ್ತು ಇಲ್ಲದೆಯೇ ಈಗ ಸಹಸ್ರಾರು ಜನ ಪ್ರಾಣತ್ಯಾಗಮಾಡಿದ್ದಾರೆ. ನಮ್ಮಲ್ಲಿ ಶಿಸ್ತು ಚೆನ್ನಾಗಿದ್ದರೆ ನಿಜವಾಗಿ ನಾವು ಸಂಪಾದಿಸಿರತಕ್ಕ ಸ್ವಾತಂತ್ರ್ಯ ಉಳಿಯುತ್ತದೆ ಎಂಬ ನಂಬಿಕೆ ನನಗಿದೆ. ಅಂತಹ ಒಂದು ಶಿಸ್ತನ್ನು ನಾವು ಪರಿಪಾಲನೆ ಮಾಡಬೇಕಾದರೆ ಇಂತಹ ಟ್ರೈನಿಂಗ್ ಅತ್ಯಾವಶ್ಯಕ. ಈ ಕಾನೂನನ್ನು ಇಡೀ ಸಂಸ್ಥಾನದ ಪ್ರತಿಯೊಂದು ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲಿ ಇಂಟ್ರಡ್ಯೂಸ್ ಮಾಡಬೇಕು. ಅದಕ್ಕೆ ಎಷ್ಟೇ ಖರ್ಚಾದರೂ ಸರ್ಕಾರ ಮನಸ್ಸು ಮಾಡಬೇಕೆಂದು ಹೇಳಿ ಮತ್ತೊಮ್ಮೆ ಈ ಮಸೂದೆಗೆ ನನ್ನ ಪೂರ್ಣ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಸ್ವಾಮಿ, ನಾನು ಈ ಹೋಂಗಾರ್ಡ್ಸ್ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದು ಎಲ್ಲಾ ಕಾಲಕ್ಕೂ ಒಂದು ಅಗತ್ಯವಾದಂಥ ಸಂಸ್ಥೆ. ಅದರಲ್ಲೂ ಕೂಡ ಈ ವಿಷಮ ಕಾಲದಲ್ಲಿ ಇದು ತ್ವರಿತವಾಗಿ ರಚನೆಯಾಗಬೇಕು. ಅತ್ಯಂತ ಅವಶ್ಯಕವಾಗಿ ಆಗಬೇಕು ಎಂದು ಹೇಳುವುದರಲ್ಲಿ ಏನೂ ಸಂದೇಹವಿಲ್ಲ. ಇದನ್ನು ಮನವರಿತು ನಮ್ಮ ಸರ್ಕಾರದವರು ಜಾಗ್ರತೆಯಾಗಿಯೇ ಈ ಮಸೂದೆಯನ್ನು ನಮ್ಮ

(ಶ್ರೀ ಟಿ. ಮಾದಯ್ಯ ಗೌಡ)

ಮುಂದೆ ತಂದು ಪಾಸ್ ಮಾಡುವಂತಹವರಾಗಿದ್ದಾರೆ. ಆದಕ್ಕೋಸ್ಕರ ನಾನು ಸರ್ಕಾರದವರನ್ನು ಹೃತ್ಪೂರ್ವಕವಾಗಿ ವಂದಿಸಬೇಕಾಗಿದೆ. ನನಗೆ ಈ ಒಂದು ಮಸೂದೆಯಲ್ಲಿರತಕ್ಕಂಥ ಕೆಲವು ಸಂಶಯಗಳಿರುವ ಕಾರಣ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಲ್ಲಿ ಹೋಂಗಾರ್ಡಿಗೆ ಸೇರಬೇಕಾದಂಥವರು ಯಾರು, ಅವರ ಯೋಗ್ಯತೆ ಏನು, ಅವರ ವಯಸ್ಸು ಏನು, ಅವರ ಪೂರ್ವೋತ್ತರಗಳೇನು ಎಂಬುದಕ್ಕೆ ಸರಿಯಾದಂಥಾದ್ದು ಈ ಮಸೂದೆಯಲ್ಲಿ ಏನೊಂದು ನಿಗದಿಯಿಲ್ಲವೆಂದು ನನಗೆ ಕಾಣುತ್ತದೆ. 4ನೇ ಕಾಲಂನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಆದನ್ನು ಇಲ್ಲಿ ಓದಿ ಹೇಳುತ್ತೇನೆ. "Such number of persons who are fit and willing to serve" ಯಾರು ಫಿಟ್‌ನೆಸ್ ಎಂದು ಕಂಡು ಹಿಡಿಯುತ್ತಾರೆ, ಅದಕ್ಕೇನು ವಿವರಣೆ ಹಾಕಿದ್ದಾರೆಂದರೆ ಅದು ನಿರ್ದಿಷ್ಟವಾಗಿಲ್ಲ. Rule-making powers ಮಾಡುವವರು ಈ ಫಿಟ್‌ನೆಸ್ ಎಂಬುದಕ್ಕೆ ಆದರಲ್ಲಿ ಏನು ನಿರ್ಧಾರ ಮಾಡಿದ್ದಾರೆಂಬುದು ನನಗೆ ಈ ಮಸೂದೆಯಲ್ಲಿ ಕಂಡುಬರಲಿಲ್ಲ.

ಆ ರೀತಿ ಪವರ್ಸ್ ಅದಕ್ಕೋಸ್ಕರ ಇದಕ್ಕೆ ಯಾರು ಯೋಗ್ಯರು, ಯಾರನ್ನು ಚುನಾವಣೆ ಮಾಡಿಕೊಂಡರೆ ಈ ಹೊಂಗಾರ್ಡ್ ವ್ಯವಸ್ಥೆ ಸುವ್ಯವಸ್ಥೆಯಾಗುತ್ತದೆ, ಅದರ ಫಲದೊರಕುತ್ತದೆ ಎನ್ನುವುದಕ್ಕೆ ನಿರ್ದಿಷ್ಟವಾಗಿ ಸರ್ಕಾರದವರು ಒಂದು ನೀತಿಯನ್ನು ಅನುಮೋದಿಸಬೇಕು ಎಂಬುದಾಗಿ ನಾನು ಅಭಿಪ್ರಾಯ ಪಡುತ್ತೇನೆ. ಅಲ್ಲದೆ ಈ ಹೋಂಗಾರ್ಡ್ಸ್ ಯಾವ್ಯಾವ ಟೌನಿನಲ್ಲಿ ಎಷ್ಟೆಷ್ಟು ಇರಬೇಕು, ಎಷ್ಟು ಜನಸಂಖ್ಯೆ ಇರತಕ್ಕ ಪಟ್ಟಣಗಳಲ್ಲಿ ಎಷ್ಟು ಜನ ಹೋಂಗಾರ್ಡ್ಸ್ ಇರಬೇಕು ಎನ್ನುವುದು ಒಂದನ್ನು ಜಾಗ್ರತೆಯಾಗಿ ನಿರ್ದಿಷ್ಟಪಡಿಸುವುದು ಒಳ್ಳೆಯದು. 10 ಸಾವಿರ ಪ್ರಜಾಸಂಖ್ಯೆ ಇರತಕ್ಕ ಒಂದು ಪಟ್ಟಣದಲ್ಲಿ 500 ಜನರನ್ನು ತರಪೇತು ಮಾಡುವುದು, ಅಥವಾ 50 ಸಾವಿರ ಜನಸಂಖ್ಯೆ ಇರತಕ್ಕ ಪಟ್ಟಣದಲ್ಲಿ ಕೇವಲ 100 ಜನರನ್ನು ತರಪೇತು ಮಾಡುವುದು—ಇದು ಸೂಕ್ತವಲ್ಲ. ಆದಕ್ಕೆ ಒಂದು ಸರಿಯಾದಂಥ ನಿಗದಿಯನ್ನು ಏರ್ಪಾಡು ಮಾಡಿಕೊಂಡರೆ ಒಳ್ಳೆಯದು ಎಂಬುದಾಗಿ ನನ್ನ ಅಭಿಪ್ರಾಯ. ಇದು ಕೇವಲ ಫೈನಾನ್ಸ್ ಮೆಮೊರ್ಯಾಂಡಂನಲ್ಲಿ 20ಸ್ಥಳಗಳಲ್ಲಿ ರಚನೆ ಮಾಡಲಾಗುತ್ತೆ ಎಂದು ಕೊಡಲಾಗಿದೆ. 20 ಸ್ಥಳಗಳೆಂದರೆ, ನಗರಗಳೇ, ಪಟ್ಟಣಗಳೇ ಅಥವಾ ಹಳ್ಳಿಗಳೇ—ಏನು ಎನ್ನುವುದು ನಮಗೆ ಗೊತ್ತಿಲ್ಲ, ಅಥವಾ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಅಥವಾ ಎರಡೆರಡೇ ಎಂಬ ಅಭಿಪ್ರಾಯವಿದೆಯೇ. ಇಂತಹ ಸ್ಥಳದಲ್ಲಿ ಈ ಹೋಂಗಾರ್ಡುಗಳನ್ನು ಏರ್ಪಾಡು ಮಾಡುತ್ತೇವೆ ಎಂಬ ಬಗ್ಗೆ ಏನೊಂದು ನಿರ್ದಿಷ್ಟವಾದ ನೀತಿಯನ್ನು ಇಟ್ಟುಕೊಂಡಿದ್ದೀರಿ ಎಂಬುದು ಇಂದರಿಂದ ಅರ್ಥವಾಗುವುದಿಲ್ಲ. ನನಗಾದರೂ ಏನೂ ಅರ್ಥವಾಗಲಿಕ್ಕಿಲ್ಲ. ರಾಮನಗರದಲ್ಲೇ, ಕಾರ್ಕಾರ್ ಹಳ್ಳಿಯಲ್ಲೇ, ಅಥವಾ ಬೆಂಗಳೂರಿನ ಯಾವ ಜಿಲ್ಲೆಯಲ್ಲಿ, ಯಾವ ಊರಿನಲ್ಲಿ ಮಾಡುತ್ತಿದ್ದಾರೆನ್ನುವುದು ಇದರಿಂದೇನೂ ಗೊತ್ತಾಗುವುದಿಲ್ಲ. ಆದಕೋಸ್ಕರ ಸರ್ವೇಸಾಧಾರಣವಾಗಿ 10 ಸಾವಿರ ಪ್ರಜಾಸಂಖ್ಯೆ ಇರತಕ್ಕ ಎಲ್ಲಾ ಪಟ್ಟಣಗಳಲ್ಲೂ ಹೋಂಗಾರ್ಡುಗಳನ್ನೂ ಏರ್ಪಾಡು ಮಾಡುವುದು ಆಗತ್ಯವಿದೆ. ಒಂದೊಂದು ಕಡೆ ಹೆಚ್ಚು ಜನಗಳು ಇದಕ್ಕಾಗಿ ಸಿಗುವುದಿಲ್ಲ. ಒಂದು ವೇಳೆ ಸಿಕ್ಕಿದರೂ ಹೆಚ್ಚಾಗಿ ಒಂದೇ ಊರಿನಲ್ಲಿ ಏರ್ಪಾಡು ಮಾಡುವುದಕ್ಕೆ ಬದಲಾಗಿ ಒಂದೊಂದು ಕಡೆ 40-50 ಜನ ಹೋಂಗಾರ್ಡುಗಳಿದ್ದರೆ, ಆ ಊರಿನ ಮತ್ತು ಆ ತಾಲ್ಲೂಕಿನ ಒಂದು ಸಂರಕ್ಷಣೆಯಾಗಬಹುದು ಎಂಬುದಾಗಿ ನಾನಾದರೂ ಅಭಿಪ್ರಾಯ ಪಡುತ್ತೇನೆ.

ಮತ್ತೊಂದು ವಿಚಾರ—ಈ ಕಮಾಂಡೆಂಟ್ ಜನರಲ್ ಈ ಹೊಂಗಾರ್ಡ್‌ಗಳನ್ನು ನೇಮಕ ಮಾಡುತ್ತಾರೆ. ಅವರನ್ನು ನೇಮಕ ಮಾಡುವವರು ಸರಿಯಾದ ದಕ್ಷತೆ ಅವರಲ್ಲಿ ಸರಿಯಾದಂಥ ಶಿಸ್ತು, ಆವರಲ್ಲಿ ಸರಿಯಾದಂಥ ಯೋಗ್ಯತೆ ಇದ್ದರೆ, ಅವರ ಕೈಕೆಳಗೆ ಇರುವ ಹೋಂಗಾರ್ಡ್ಸ್ ದಕ್ಷತೆಯಿಂದ ನಡೆಯುತ್ತಾರೆ. ಆಗ ಏನೆಂದು ಉದ್ದೇಶ ಸಾಧನೆಗೋಸ್ಕರ ಇದನ್ನು ಮಾಡುತ್ತಿದ್ದಾರೋ ಆ ಉದ್ದೇಶ ನಿಜವಾಗಿ ನೆರವೇರುತ್ತದೆಂದು ನಾನು ಅಭಿಪ್ರಾಯ ಪಡುತ್ತೇನೆ. ಇದರಿಂದ ನನಗೆ ಅರ್ಥವಾಗುವುದಿಲ್ಲ ಈ ಕಮಾಂಡೆಂಟ್ ಜನರಲ್ ಸಿವಿಲಿಯನ್ಸ್, ಅಥವಾ ಮಿಲಿಟರಿ ಅಥವಾ ಸಾಮಾನ್ಯ ಪೋಲೀಸಿನವರಂತಹವರೇ ಎಂಬುದು ಯಾವುದೂ ಇದರಿಂದ ಅರ್ಥವಾಗುವುದಿಲ್ಲ. ಒಂದು ವೇಳೆ ಪೋಲೀಸಿನವರು ಸಿವಿಲಿಯರ್ ಅಧಿಕಾರಿಯಾದರೆ ಯಾವ ದರ್ಜೆಯ ಅಧಿಕಾರಿಗಳನ್ನು ಈ ಕೆಲಸಕ್ಕೆ ನೇಮಕ ಮಾಡುತ್ತಾರೆಂಬುದು ಇದರಿಂದ ಅರ್ಥವಾಗುವುದಿಲ್ಲ. ಕಮ್ಯಾಂಡೆಂಟ್ ಜನರಲ್‌ಗೆ ಒಂದು ಹೆಚ್ಚಿನ ಅಧಿಕಾರವಿರುತ್ತದೆ. ಅವರು ಯಾವ ಕಾಲದಲ್ಲಿ ಬೇಕಾದರೂ ಈ ಹೋಂಗಾರ್ಡುಗಳನ್ನು ಕರೆದು ಆವರಿಗೆ ಕೆಲಸಗಳನ್ನು ನೇಮಿಸಬಹುದು. ಆದು ಬಹಳ ಜವಾಬ್ದಾರಿಯಾದುದು. Commandant to Commandants ಎನ್ನುವವರು ಬಹಳ ನಿಪುಣರು, ತಿಳುವಳಿಕಸ್ಥರು, ದಕ್ಷರು, ಯೋಗ್ಯರು ಆಗಿರಬೇಕಾದುದು ಆಗತ್ಯ ಮತ್ತು ಅವರಲ್ಲಿ ಶಿಸ್ತೂ ಎನ್ನುವುದು ಒಂದು ರೂಪಾಯಿಗೆ 100 ನಯೇ ಪೈಸ ಅಷ್ಟು ಪೂರ್ತಿ ಇರಬೇಕು. ಅವರಲ್ಲಿ ಏನಾದರೂ ಶಿಸ್ತು ಕಡಿಮೆಯಾದರೆ ಪೂರ್ತಿಯಾಗಿ ಹೋಂಗಾರ್ಡುಗಳ ಶಿಸ್ತೂ ಸಹ ಕಮ್ಮಿಯಾಗುತ್ತದೆ. ಈ ವಿಷಯದಲ್ಲಿ ನನ್ನ ಅನೇಕ ಸ್ನೇಹಿತರು ಹೇಳಿದ ಹಾಗೆ ಆದೊಂದರಲ್ಲಿ ಸ್ವಲ್ಪ ತೊಂದರೆಯಾಗುತ್ತದೆಂದು ನನ್ನ ಅಭಿಪ್ರಾಯವೂ ಆಗಿದೆ.

ಮತ್ತೊಂದು ವಿಷಯ. ಈ ಹೋಂಗಾರ್ಡ್ಸ್ ಏನೇನು ಕರ್ತವ್ಯಗಳನ್ನು ಮಾಡಬೇಕು ಎನ್ನುವುದಕ್ಕೆ ಇದರಲ್ಲಿ ನಿರ್ದಿಷ್ಟವಾಗಿಲ್ಲ. ನಾಳೆ ನಾನು ಹೋಂಗಾರ್ಡ್ ಸಂಸ್ಥೆಗೆ ಸೇರುವುದಾದರೆ ನನ್ನ ಕರ್ತವ್ಯಗಳೇನು, ಯಾವ್ಯಾವ ಕೆಲಸಕ್ಕೆ ನನ್ನನ್ನು ನೇಮಿಸುತ್ತಾರೆಂಬುದನ್ನು ಮೊದಲೇ ತಿಳಿಯಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರಿಗೆ ವಯಸ್ಸಾಗಿದೆಯಲ್ಲಾ ! ಇವರಿಗೆ ಓಡುವುದಕ್ಕಾಗುತ್ತದೆಯೋ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮನೆಯಲ್ಲಿ ಅವರು ಹೋಂಗಾರ್ಡ್. (ನಗು)

ಅಧ್ಯಕ್ಷರು.— ಹೋಂಗಾರ್ಡ್ಸ್ ಓಡುವುದಿಲ್ಲ ಓಡಿಸುವುದು !

ಶ್ರೀ ಟಿ. ಮಾದಯ್ಯಗೌಡ.—ಆದರಿಂದ ನಾನು ಹೇಳುವುದೇನೆಂದರೆ, ಈ ಸಂಸ್ಥೆಗೆ ಸೇರತಕ್ಕಂಥ ಜನಗಳಿಗೆ ಒಂದು ನಿರ್ದಿಷ್ಟವಾದ ಅಭಿಪ್ರಾಯ ಬೇಕು. ತನ್ನನ್ನು ಯಾವ್ಯಾವ ಕೆಲಸಗಳಿಗೆ ಉಪಯೋಗಿಸುತ್ತಾರೆ, ಯಾವ್ಯಾವ ವೇಳೆಯಲ್ಲಿ ಏನೇನು ಕೆಲಸಗಳನ್ನು ಮಾಡಬೇಕಾಗುತ್ತದೆ ಎನ್ನುವುದು ನಿರ್ದಿಷ್ಟವಾಗಿ ಇರಬೇಕು. ಅಥವಾ ಅದಕ್ಕೂ ಕೂಡ ರೂಲ್ ಮೇಕಿಂಗ್ ಪವರ್ಸ್ ತೆಗೆದುಕೊಂಡು ಆ ಕಾನೂನುಗಳಲ್ಲಿಯೇ ಇಂತಿಂಥ ಕೆಲಸಗಳಿಗೆ ಈ ಹೋಂಗಾರ್ಡ್‌ಗಳು ಬೇಕೆಂಬುದು ಸ್ಪಷ್ಟವಾಗಿರಬೇಕು. ಇಲ್ಲದೇ ಹೋದರೆ ನಾವು ಸೇರುವಾಗ ನಮ್ಮನ್ನು ಯಾವ ಉದ್ದೇಶದಿಂದ ತೆಗೆದುಕೊಳ್ಳುತ್ತಾರೋ ಆ ಉದ್ದೇಶ ಒಂದು ವೇಳೆ ಇಲ್ಲದೆಯೇ ಇರಬಹುದು. ಅವರ ಉದ್ದೇಶ ಪೂರ್ತಿಯಾಗಲೆಂದು ಹೆಚ್ಚಿಗೆ ಕಮ್ಯಾಂಡೆಂಟ್ ಆರ್ಡರ್‌ಗಳನ್ನು ಮಾಡಬಹುದು. ಆಗ ಬಹಳ ತೊಂದರೆಯಾಗುತದೆ. ಘರ್ಷಣೆಯಾಗುತ್ತದೆ. ಅದು ಸರಿಯಾಗಿರುವುದಿಲ್ಲ. ಇಲ್ಲವೇ ಸರಿಯಾದ ರೀತಿಯಲ್ಲಿ ಕಾನೂನುಗಳನ್ನು ಮಾಡಲಿ, ಇಲ್ಲವೇ ನಿರ್ದಿಷ್ಟವಾದ ಕಾನೂನುಗಳಲ್ಲಿ ಇಂತಿಂಥ functions and duties ಎನ್ನುವುದನ್ನು ಈ ಮಸೂದೆಯಲ್ಲಿ ನಿರ್ದಿಷ್ಟಪಡಿಸಬೇಕೆಂದು ನಾನು ಸೂಚನೆ ಮಾಡುತ್ತೇನೆ. ಹಳೆಯ ಮೈಸೂರಿನಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಕೂಡ ಈ ಪೋಲೀಸ್ ಆಕ್ಟ್ ಪ್ರಕಾರ ಕಡ್ಡಾಯವಾಗಿ ರಾತ್ರಿ ಕಾವಲು ಹಾಕಬೇಕೆಂದು ಒಂದು ನಿಗದಿ ಇದೆ.

4 P. M.

ಪ್ರತಿಯೊಂದು ಗ್ರಾಮದಲ್ಲೂ ಎಲ್ಲೆಲ್ಲಿ ಯುವಕರಿದ್ದಾರೋ ಅವರೆಲ್ಲರನ್ನೂ ಒಂದು ಪಟ್ಟಿಮಾಡಿ ಪ್ರತಿಗ್ರಾಮದನು ಪ್ರತಿ ದಿನವೂ ಇಂತಿಷ್ಟು ಜನ ಗ್ರಾಮದ ರಾತ್ರಿ ಕಾವಲನ್ನು ಕಾಯಬೇಕೆಂಬ ನೇಮ ಈಗಲೂ ಆ ಪೋಲೀಸ್ ಆಕ್ಟಿನಲ್ಲಿರಬೇಕು. ಈ ನೇಮ ಈ ಹಿಂದೆ ಪ್ರತಿ ಗ್ರಾಮದಲ್ಲೂ ಜಾರಿಯಲ್ಲಿತ್ತು. ಆಯಾಯ ಗ್ರಾಮದಲ್ಲಿ ಸರ್ತಿಪ್ರಕಾರ 3–4 ಜನರು ಆ ಊರಿನ ಚಾವಡಿಯಲ್ಲಿ ಇದ್ದುಕೊಂಡು ರಾತ್ರಿಕಾಲದಲ್ಲಿ ಆ ಗ್ರಾಮದ ಕಾವಲು ಕಾಯಬೇಕೆಂಬ ನೇಮವಿತ್ತು. ಅದನ್ನು ಆಗಿಂದಾಗ್ಗೆ ಪೋಲೀಸ್ ಅಧಿಕಾರಿಗಳು ಹೋಗಿ ಪರೀಕ್ಷೆ ಮಾಡುತ್ತಿದ್ದರು. ಹಾಗೆ ಎಲ್ಲಿ ಆ ನೇಮವನ್ನು ಆಚರಿಸದೇ ಕೈ ಬಿಟ್ಟರೋ ಅಂಥ ಕಡೆಗಳಲ್ಲಿ ಆ ಜನರ ಮೇಲೆ ಕೇಸ್ ಹಾಕಿ ಅವರಿಗೆ ಮಾಜಿಸ್ಟ್ರೇಟರಿಂದ ಜುಲ್ಮಾನೆ ಹಾಕಿಸತಕ್ಕ ಪದ್ಧತಿ ಇತ್ತು. ಈಗ ಅನೇಕ ಕಡೆಗಳಲ್ಲಿ ಈ ಪದ್ಧತಿ ಜಾರಿಯಲ್ಲಿರುವಂತೆ ಕಾಣುತ್ತಿಲ್ಲ. ಆದರೆ ಇದರ ಅಗತ್ಯ ಬಹಳವಾಗಿದೆ. ಎಲ್ಲೆಲ್ಲಿ ಈಗಲೂ ರಾತ್ರಿ ಕಾವಲಿರುತ್ತದೋ ಅಲ್ಲಿ ಕಳ್ಳಕಾಕರ ಮತ್ತು ಪುಂಡು ಪೋಕರಿಗಳು ಕಾಟ ಅಷ್ಟಾಗಿರುವುದಿಲ್ಲ. ಆದ್ದರಿಂದ ಈಗ ಈ ಹೋಂಗಾರ್ಡ್ಸ್ ಶಿಸ್ತನ್ನು ಜಾರಿಗೆ ತರತಕ್ಕ ಕಾಲದಲ್ಲೇ ಎಲ್ಲೆಲ್ಲಿ ಈ ರಾತ್ರಿ ಗಸ್ತಿನ ಕಾವಲಿಲ್ಲವೋ ಅಲ್ಲಲ್ಲಿ ಈ ನೈಟ್ ಕಾವಲ್ ಪದ್ಧತಿಯನ್ನು ರಿವೈವ್ ಮಾಡಬೇಕೆಂದು ಹೇಳುತ್ತೇವೆ. ಇಷ್ಟು ಹೇಳಿ ಈ ಹೋಂಗಾರ್ಡ್ ಮಸೂದೆಗೆ ನನ್ನ ಹೃತ್ಪೂರ್ವಕವಾದ ಸ್ವಾಗತವನ್ನು ನೀಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸ್ವಾಮಿ, ಸಾಮಾನ್ಯವಾಗಿ ಆಡಳಿತ ಪಕ್ಷದವರು ಯಾವಾಗಲೂ ಈ ನಮ್ಮ ವಿರೋಧ ಪಕ್ಷದವರು ಟೀಕೆಟಿಪ್ಪಣಿಗಳಲ್ಲೇ ಇರುತ್ತಾರೆಂದು ಹೇಳುತ್ತಿದ್ದರು. ಆದರೆ ಆ ಭಾವನೆ ಸರಿಯಾದ್ದಲ್ಲ ಎಂಬುದಕ್ಕೆ ಇದು ಒಂದು ಒಳ್ಳೆಯ ನಿದರ್ಶನವಾಗಿದೆ. ಯಾವತ್ತೇ ಆಗಲಿ, ಯಾವ ವಿಚಾರವೇ ಆಗಲಿ, ಅದರಿಂದ ದೇಶಕ್ಕೂ ಸಮಾಜಕ್ಕೂ ಒಳ್ಳೆಯದಾಗುತ್ತದೆ. ಅದರಿಂದ ಕಲ್ಯಾಣವಾಗುತ್ತದೆ ಎಂಬುದಾಗಿದ್ದರೆ ಅದನ್ನು ಸ್ವಾಗತಿಸತಕ್ಕ ಈ ಮನೆಯ ಎಲ್ಲ ಸದಸ್ಯರ ಕರ್ತವ್ಯವೆಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ನಾವು ವಿರೋಧ ಪಕ್ಷದ ಸದಸ್ಯರಾಗಿದ್ದಾಗ್ಯೂ ಈ ಮಸೂದೆ ದೇಶಕ್ಕೆ ಒಳ್ಳೆಯದಾದುದರಿಂದ ಇದನ್ನು ನಮ್ಮ ಪಕ್ಷದವರು ಕೂಡ ಸ್ವಾಗತಿಸೇ ಸ್ವಾಗತಿಸುತ್ತಾರೆ. ಆದರೆ ಈಗಾಗಲೆ ನಮ್ಮ ಶ್ರೀ ಬಿ. ಎಲ್. ಗೌಡರು ಹೇಳಿದ ಹಾಗೆ ಈ ಗೃಹರಕ್ಷಣಾ ಗಾರ್ಡುಗಳ ದಳವನ್ನು ರಾಜಕೀಯಕ್ಕೆ ಬಳಸಬಾರದು. ಏಕೆಂದರೆ ಈಗ್ಗಾಗಲೇ ಅನೇಕ ಇಂಥಾ ಪಕ್ಷಗಳು ಈಗಾಗಲೆ ಸರ್ಕಾರದ ಅಧೀನಕ್ಕೆ ಒಳಗಾಗಿ ಅನೇಕ ಸಣ್ಣಪುಟ್ಟ ಚುನಾವಣೆಯಲ್ಲಿ ಅಂದರೆ ಗ್ರಾಮಪಂಚಾಯಿತಿ ಇತ್ಯಾದಿ ಚುನಾವಣೆಗಳಲ್ಲಿ ಅವುಗಳ ಉಪಯೋಗವನ್ನು ತೆಗೆದುಕೊಳ್ಳಲಾಗುತ್ತಿದೆ. ಮುಂದೆ ಇದರ ಹಣೇಬರಹವೂ ಹಾಗೇ ಆಗುವುದೇನೋ ಎಂಬ ಒಂದು ಶಂಕೆ ಜನರ ಮನಸ್ಸಿನಲ್ಲಿ ಮೂಡುವುದು ಸ್ವಾಭಾವಿಕ. ಆದರೆ ಹಾಗಾಗಬಾರದು ಎಂತ ಕೇಳಿಕೊಳ್ಳುತ್ತೇನೆ. ದೇಶದ ಹಿತರಕ್ಷಣೆಯಲ್ಲಿ ತೊಡಗುವ ಈ ಗೃಹರಕ್ಷಣಾ ದಳಗಳನ್ನು ಇಂಥ ಕ್ಷುಲ್ಲಕ ಕಾರ್ಯಗಳಿಗೆ ಉಪಯೋಗ ಮಾಡಿಕೊಳ್ಳಬಾರದೆಂದು ನಾನು ಈಗಲೇ ಎಚ್ಚರಿಕೆ ಕೊಡಲಿಚ್ಛಿಸುತ್ತೇನೆ.

ಮತ್ತೊಂದು ವಿಚಾರವೇನೆಂದರೆ ಈ ಗೃಹ ರಕ್ಷಣಾ ದಳಕ್ಕೆ ಸೇರಿಸಿಕೊಳ್ಳತಕ್ಕವರ ಪೂರ್ವ ಇತಿಹಾಸ–ಅವರ ನಡತೆ ಇತ್ಯಾದಿಗಳನ್ನು ವಿಚಾರ ಮಾಡದೆ ಅವರನ್ನು ಸೇರಿಸಿಕೊಳ್ಳಬಾರದು. ಏಕೆಂದರೆ ಕೆಲವರು ಈ ಹಿಂದೆ ಹಳ್ಳಿಗಳಲ್ಲಿ ಯಾವುದೋ ಸಂಘ ಸಂಸ್ಥೆಗಳನ್ನು ಮಾಡಿಕೊಂಡು ಆ ಊರಿನಲ್ಲಿ ಏನಾದರೂ ಜಮೀನು ಇತ್ಯಾದಿಗಳಿದ್ದರೆ ಆ ಊರಿನಲ್ಲಿರತಕ್ಕ ಅನಕ್ಷರಸ್ಥರಾದ ಹತ್ತಾರು ಜನಗಳ ಹೆಬ್ಬೆಟ್ಟಿನ ಗುರ್ತು ಹಾಕಿಸಿಕೊಂಡು ಆ ಜಮೀನನ್ನೆಲ್ಲಾ ಕೋ-ಆಪರೇಟಿವ್ ಫಾರಂ ಅಂತಹೇಳಿ ಒಬ್ಬನೇ ಅಪಪಾಯಿಸಿಕೊಂಡು ಆ ಜಮೀನಿನಲ್ಲಿ ಹತ್ತು ಪಲ್ಲ ರಾಗಿ ಆದರೆ ಆ ಜನಗಳಿಗೆಲ್ಲ ಒಂದೆರಡು ಪಲ್ಲ ಕೊಟ್ಟು ಉಳಿದುದನ್ನೆಲ್ಲಾ ಆತನೆ ತಿಂದು ಹಾಕುವಂತೆ ಈ ಸಂದರ್ಭದಲ್ಲೂ ಆಗಬಾರದು. ಈ ಹಿಂದೆಯೂ ಹಳೇ ಮೈಸೂರಿನಲ್ಲಿ ಈ ಹೋಂ ಗಾರ್ಡ್ ಶಿಬ್ಬಂದಿಯಿತ್ತು. ಆಗೆಲ್ಲ ಅವರು ಬಹಳ ಉತ್ತಮವಾದ ಸೇವೆ ಸಲ್ಲಿಸಿದ್ದಾರೆ. ಆಗ ನಮ್ಮ ಸರ್ಕಾರ ಅವರನ್ನು ತೆಗೆದು ಹಾಕಬೇಕೆಂದು ಹೇಳಿದಾಗ ಖಂಡಿತ ಅವರನ್ನು ತೆಗೆಯಬಾರದೆಂದು ನಾನು ಸರ್ಕಾರಕ್ಕೆ ಬಹಳ ಒತ್ತಾಯ ಮಾಡಿದ್ದೆ; ಮನವಿ ಸಹ ಮಾಡಿಕೊಂಡಿದ್ದೆ. ಆದರೇನೂ ಪ್ರಯೋ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಜನವಾಗಲಿಲ್ಲ. ಅವರ ಬಟ್ಟೆ-ಕಾಲುಚೀಲಗಳನ್ನೆಲ್ಲಾ ಕಿತ್ತುಕೊಂಡು ಅವರನ್ನು ಓಡಿಸಿಬಿಟ್ಟರು. ಆದರೆ ಈಗ ಅವೇನೋ ಹೇಳುತ್ತಾರಲ್ಲ "ಸಾಬರ ಗಡ್ಡಕ್ಕೆ ಬೆಂಕಿ ಹತ್ತಿದ್ದಾಗ-ಬಾವಿ ತೆಗೆಸಿದರು" ಎಂದ ಹಾಗೆ. ಈಗ ಹಿಂದೆ ಕಾಡಿಗಟ್ಟಿದ್ದವರನ್ನು ಮತ್ತೆ ಕರೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ! ಏನೋ ದೇಶದಲ್ಲಿ ಒಂದು ಎಮರ್ಜೆನ್ಸಿ ಬಂತು. ಅದಕ್ಕಾಗಿ ಈಗ ತಗಾದೆ ಮಾಡುತ್ತಿದ್ದಾರೆ. ಹಾಲು ಕರೆದುಕೊಂಡನಂತರ ಮತ್ತೆ ಆಕಳನ್ನು ಕಾಡಿಗೋಡಿಸತಕ್ಕ ಪ್ರಯತ್ನ ಮಾಡಬಾರದು. ಆದರೆ ಇಲ್ಲಿಯತನಕ ಆಡಳಿತ ಪಕ್ಷದ ಧೋರಣೆ ಏನಿತ್ತೆಂದರೆ "ಏನೇ ಬರಲಿ-ಏನೇ-ಬರಲಿ" ನಮ್ಮದು ಮ್ಯಾಜಾರಿಟಿ ಪಕ್ಷ ಎಂಬ ಧೋರಣೆಯ ಭಾವನೆಯಿತ್ತು. ಆದರೆ ಈಗ ಅದನ್ನು ಸ್ವಲ್ಪಕ್ಕೆ ಬಿಟ್ಟಿರುವಂತೆ ಕಾಣುತ್ತಿದೆ. ಈ ಹಿಂದೆ ಇದಕ್ಕಾಗೇ ಒಂದು ಅವಿಶ್ವಾಸ ನಿರ್ಣಯ ಕೂಡ ಬಂದಿತ್ತು. ಆದರೆ ಕೇಂದ್ರದವರು ಈಗ ಅದಕ್ಕೆಲ್ಲ ಅವಕಾಶ ಕೊಡುವುದಿಲ್ಲ ಎಂತ ಕೆಲವರು ತಿಳಿದಿದ್ದಾರೆ. ಅದೇನೇ ಇರಲಿ ಈಗ 20 ಸ್ಥಳಗಳಲ್ಲಿ ಈ ಗೃಹ ದಳದ ಕೇಂದ್ರಗಳನ್ನು ತೆರೆಯುವುದಾಗಿ ತಿಳಿಸಿದ್ದಾರೆ. ಆದರೆ 5,000ಕ್ಕೆ ಮೇಲ್ಪಟ್ಟು 10,000 ಪ್ರಜಾಸಂಖ್ಯೆ ಇರುವ ಪ್ರತಿ ಸ್ಥಳದಲ್ಲೂ ಒಂದೊಂದು ಗೃಹದಳದ ಕೇಂದ್ರವನ್ನು ಏರ್ಪಡಿಸಬೇಕೆಂದು ಸೂಚಿಸಲಿಚ್ಛಿಸುತ್ತೇನೆ. ಮತ್ತೊಂದು ವಿಚಾರವೇನೆಂದರೆ ಈ ಗೃಹದಳಕ್ಕೆ ಸೇರತಕ್ಕ ಜನಗಳೇನಿದ್ದಾರೆ ಅವರಿಗೆ ಈ ಪದ್ಧತಿಯನ್ನು ಯಾವಾಗ ಸರ್ಕಾರದವರು ಕಿತ್ತು ಹಾಕಿಬಿಡುತ್ತಾರೋ ಎಂಬ ಅನುಮಾನ ಅವರಿಗೆ ಬರಬಾರದು. ಅವರಿಗೆ ಲಾಯಖಾದ ತರಬೇತಿ ಕೊಡಬೇಕು. ಆಡಳಿತ ಪಕ್ಷದವರು ನಾವು ಗಾಂಧಿ ವಾದಿಗಳು ಅಹಿಂಸಾ ತತ್ವದವರು ಎಂತ ಬೇರೆಯವರು ನಮ್ಮ ಮೇಲೆ ಬಾಂಬು ಎಸೆಯುವುದಕ್ಕೆ ಬಂದಿರುವಾಗ ನಾವು ಈಗ ನಮ್ಮ ಹುಡುಗರು ಬಿದಿರು ಕಡ್ಡಿಯಲ್ಲಿ ಅದೇನೋ ಸೊಪ್ಪಿಟ್ಟು ಚಟಕ್ ಎಂತ ಹೊಡೆಯುತ್ತಿರುವ ಆಯುಧಗಳನ್ನು ಕೊಟ್ಟು ಶಿಕ್ಷಣ ಕೊಡಬಾರದು. ನಮ್ಮ ಶತ್ರುಗಳು ಯಾವ ರೀತಿ ತಯಾರಾಗಿ ಬರುತ್ತಾರೋ ನಾವೂ ಅದೇ ರೀತಿ ತಯಾರಾಗಿ ಹೋಗಿ ಅವರನ್ನು ಎದುರಿಸಬೇಕಾದ್ದು ನ್ಯಾಯ. ಈ ವಿಚಾರವನ್ನು ಮಾನ್ಯ ಮಂತ್ರಿಗಳು ಮುಖ್ಯವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು.

ಆದರೆ ನಮ್ಮ ಬಿಜಿನೆಸ್ ಅಡ್ವೈಸರಿ ಕಮಿಟಿಯವರು ಬಹು ಪ್ರಾಮುಖ್ಯವಾದ ಬಿಲ್ಲುಗಳಿಗೆ ಚರ್ಚೆ ಮಾಡಲು ಅರ್ಧ ಗಂಟೆ ಒಂದು ಗಂಟೆ ಕೊಟ್ಟು ಈ ಸಾಮಾನ್ಯ ಬಿಲ್ಲಿಗೆ ಒಂದೂವರೆ ಗಂಟೆ ಕಾಲವನ್ನು ಚರ್ಚೆಗೆ ನಿಗದಿ ಮಾಡಿದ್ದಾರೆ. ಇಷ್ಟು ಕಾಲಾವಕಾಶ ಈ ಮಸೂದೆಗೆ ಬೇಕಾಗಿರಲಿಲ್ಲ ಎಂತ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri ANGADI CHANNABASAPPA (Hadagalli).—Sir, I welcome this Bill. As I read the preamble I find it stated "whereas it is expedient to provide a volunteer organisation for use in emergencies and for other purposes in the State of Mysore..." In the subsequent clauses of this Bill I do not find as to what is meant by 'emergency' and what is meant by 'other purposes.' Though emergency and other purposes have got some meaning, who should declare the state of emergency and who should assign other work for this particular department which is being created now is not made clear. I wish to make a suggestion that this should be defined in the subsequent clauses or the rule-making power vested in Government under clause 12 should be made use of to make rules for defining what is meant by emergency and what is meant by other purposes. In this connection, I would like to suggest who should declare a state of emergency. I feel it would always be safe if a magistrate appointed under the Criminal Procedure Code is appointed as a person competent to declare a state of emergency.

So with regard to 'other purposes' the Home Department can give a direction as to what is meant by 'other purposes'. I would like to make a suggestion with regard to the 'preamble'. They have not defined what is meant by 'emergency'. In regard to the constitution of the Home Guard, It is not defined as to what is the prescribed educational qualifications, what is the health qualification, what should be the age of the person and who should be the appointing authority. The very spirit of this Bill is that it is a voluntary organisation. I want to know from the Home Minister whether it is possible to draw the Commandants and other officers from the regular Police Department and appoint them in this organization to work as Commandants and other officers. I know, Sir, that such kind of an Act was enacted in Bombay State and this kind of an organisation is continuing there. But, I have heared a lot of allegations against that particular organisation. Here, not to give scope

(Sri ANGADI CHANNABASAPPA)

for something which should not happen, especially at this stage, I would like to suggest to the Home Minister that he must be very particular with regard to the selections of persons, their qualifications and also their political allegiance in respect of other political parties. Of course, the Congress organisation has used certain statutory duties constituted by means of an enactment. They have used such an organisation to strengthen the Congress Organisation. One instance can be cited here. I know pretty well that the Congress Organisation has used the Khadi Board for strengthening their own organisation. I would like to say that such a thing should not happen in such an organisation which is purely meant for protecting the life and property of the people. This particular organisation is meant for defending the life and property of the people, especially in a state of emergency when our forces are engaged otherwise in the frontier. I request the Government not to give scope for their party men or other influential persons to make use of this organisation for their political ends.

†Sri ANNARAO GANAMUKHI (Afzalpur).—Sir, I welcome this Bill and I want to offer some suggestions to the Home Minister in connection with some of the sections. In Section 5, sub-sections (2) and (3), there are various provisions for calling the Home Guards for training or discharging any of the functions or duties assigned to the Home Guards. The wordings used in sub-sections (1) and (2) are not identical. I do not know what particular difference is there between these two sections. In sub-section (1) it is said that:

> "The Commandant General may at any time call out any member of the Home Guards for training, or to discharge any of the functions or duties........"

and in sub-section (2) the same thing is repeated, but the wordings are different, *viz.*,

> "The Commandant may at any time call out a member of the Home Guards for training or to discharge any of the functions or duties assigned to him........"

Here, a particular Home Guard is particularised. I had no difficulty if the Home Guards Organisation as such had been referred to in this sub-section (2), but the wording is used 'assigned to him', *i.e.*, of that particular Home Guard. Therefore, I think Sir, this may not be correct because as the Commandant is unable to call the Home Guards at the unit place in a particular Headquarters or the organisation as such, the same power should be given to the Commandant to call for any unit in a particular place. Then, there are multiple authorities to exercise such powers to call the Home Guards. For instance, the Deputy Commissioner and the District Superintendent of Police, both exercise powers with the Commandant General and also the Commander. When this is a voluntary organisation with certain powers and duties assigned to them, I do not think that the Deputy Commissioner or the District Superintendent of Police should call a member of the Home Guard. At least they should call the Commandant or the officer of that particular area and only through such officers the Home Guards Organisation may be approached. But instead of approaching the Commandant who commands the Home Guards Organisation in the District Headquarters, it is said that the Deputy Commissioner or the District Superintendent of Police can directly call a member of the

(SRI ANNARAO GANAMUKHI)

Home Guards. I think this will create some confusion or indiscipline in the Home Guards Organisation. So, I think and I deem it proper, whether it is the Deputy Commissioner or the District Superintendent of Police, both should approach the Commandant of that area, so that the Home Guards may be called through them. I think this will be the proper thing to do.

Sir, as far as punishment is concerned, the Home Guards, who perform certain duties and functions, are deemed to be public servants. Then, I do not find any security of their service. For instance—in section 9, the wordings used are different from the wordings used in section 11. In section 11 it is said that :

> " The State Government may at any time, subject to such rules as may be prescribed, dismiss, remove, suspend or reduce to a lower post or rank,............."

and these powers are exercised only subject to the rules which will be prescribed. But, in section 9, there is no reference to any rule or law to be made, and it reads as follows :—

> " The Commandant shall have the powers to suspend reduce or dismiss, or to impose fine not exceeding a sum of fifty rupees on any member of the Home Guards under his control, if such member neglects or refuses to discharge his functions and duties............"

